# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಜುಲೈ 21, 2021

ಸಂಪುಟ : 48 ಸಂಚಿಕೆ : 68 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ಅಣಜಿ ಕೆರೆ ಸುಂದರ** ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ದಾವಣಗೆರೆ ತಾಲ್ಲೂಕು ಅಣಜಿ ಕೆರೆಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಚಿತ್ರ: ರಫೀಕ್, ಜನತಾವಾಣಿ

## ಫಸಲು ವಿಮೆಗೆ ನಾಮಿನಿ ಮಾಡಿಸಿಕೊಳ್ಳಿ: ಸಚಿವ

ಬೆಂಗಳೂರು, ಜು. 20 - ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಇನ್ನು ಮುಂದೆ ಬೆಳೆ ವಿಮೆ ಮಾಡಿಸಿಕೊಳ್ಳುವಾಗ ವಿಮಾ ಕಂಪೆನಿಗಳು ರೈತನ ಕುಟುಂಬದವರೊಬ್ಬರ ಹೆಸರನ್ನು ನಾಮ ನಿರ್ದೇಶನ (ನಾಮಿನಿ) ಮಾಡಿಸಿಕೊಳ್ಳಬೇಕು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಇಂದಿಲ್ಲಿ ಸೂಚಿಸಿದ್ದಾರೆ.

ಬೆಳೆ ವಿಮೆ ಸಂಬಂಧ ಕೃಷಿ ಹಾಗೂ ತೋಟಗಾರಿಕಾ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು, ಇಷ್ಟುದಿನ ಬೆಳೆ ವಿಮೆಗೆ ವಿಮಾ ಕಂಪೆನಿಗಳು ರೈತರ ನಾಮಿನಿಯನ್ನು ಪರಿಗಣಿಸುತ್ತಿರಲಿಲ್ಲ, ಇದರಿಂದ ವಿಮಾದಾರ ರೈತ ಮೃತಪಟ್ಟಲ್ಲಿ ವಿಮೆ ಕಂತು ಪಡೆಯಲು ತೊಂದರೆಯಾಗುತ್ತಿತ್ತು ಎಂದರು.

ರೈತರ ಅನುಕೂಲಕ್ಕಾಗಿ ಇನ್ನು ಮುಂದೆ ಕಡ್ಡಾಯವಾಗಿ ಬೆಳೆ ವಿಮೆಗೆ ನಾಮಿನಿ ಮಾಡಿಸುವುದು ಕಡ್ಡಾಯ ಎಂದು ಸೂಚಿಸಿದರು. ಅಲ್ಲದೇ ಫಸಲ್ ಬಿಮಾ ಯೋಜನೆ ಮಾಡಿಸಿಕೊಳ್ಳುವ ವಿಮಾ ಕಂಪನಿಗಳು (3ನೇ ಪುಟಕ್ಕೆ)

# ಬಿಎಸ್‌ವೈ ಮುಂದುವರಿಕೆಗೆ ಕೊನೆ ಯತ್ನ

## ಲಿಂಗಾಯತ ಮಠಾಧೀಶರಿಂದ ಯಡಿಯೂರಪ್ಪಗೆ ಬೆಂಬಲ

ಬೆಂಗಳೂರು, ಜು. 20 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪತನ ನಿಶ್ಚಿತ ಎಂಬುದು ಮನದಟ್ಟಾಗುತ್ತಿದ್ದಂತೆಯೇ ಅವರನ್ನು ಹುದ್ದೆಯಲ್ಲಿ ಉಳಿಸುವ ಕೊನೆಯ ಯತ್ನ ಆರಂಭವಾಗಿದೆ.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಮತ್ತು ಅದೇ ಪಕ್ಷದ ಮತ್ತೊಬ್ಬ ನಾಯಕ ಎಂ.ಬಿ. ಪಾಟೀಲ್ ನಿನ್ನೆಯಷ್ಟೇ ಹೇಳಿಕೆ ನೀಡಿ, ಯಡಿಯೂರಪ್ಪ ಅವರನ್ನು ಬದಲಾವಣೆ ಮಾಡಿದರೆ ಲಿಂಗಾಯತ ಸಮುದಾಯವನ್ನು ಬಿಜೆಪಿ ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು.

ಇದರ ಬೆನ್ನಲ್ಲೇ ಇಂದು ರಾಜ್ಯದ ವಿವಿಧ ಲಿಂಗಾಯತ ಮಠಾಧೀಶರು ಯಡಿಯೂರಪ್ಪ ಅವರ ಬೆಂಬಲಕ್ಕೆ ನಿಂತಿದ್ದಾರೆ. ಯಡಿಯೂರಪ್ಪ ಪೂರ್ಣಾವಧಿ ಅಧಿಕಾರ ಪೂರೈಸಲು ಅವಕಾಶ ಮಾಡಿಕೊಡಿ, ಅವರನ್ನು ಬದಲಾಯಿಸಬೇಡಿ ಎಂದು ನೇರವಾಗಿ ಕೆಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಸಲಹೆ ಮಾಡಿದ್ದಾರೆ.

ಕರ್ನಾಟಕದಲ್ಲಿ ನಾಲ್ಕು ದಶಕಗಳ ಕಾಲ ಹೋರಾಟ ನಡೆಸಿ ಬಿಜೆಪಿಯನ್ನು ತಳದಿಂದ ಕಟ್ಟಿ, ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ ಎಂಬುದನ್ನು ವರಿಷ್ಠರು ಮರೆಯಬಾರದು. ಕೋವಿಡ್ ಸಂಕಷ್ಟದಲ್ಲೂ ಉತ್ತಮ ಆಡಳಿತ (2ನೇ ಪುಟಕ್ಕೆ)

### ಬಿಎಸ್‌ವೈ ಹಿಂದೆ ಸರಿದರೆ ಬಿಜೆಪಿಗೆ ತೊಂದರೆ



ದಾವಣಗೆರೆ, ಜು. 20 - ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ನವರಿಗೆ ಎಲ್ಲ ಸಮುದಾಯದ ಜನರು ಬೆಂಬಲಿಸಿ ದ್ದಾರೆ. ಅವರನ್ನು ಹಿಂದೆ ಸರಿಯುವಂತೆ ಮಾಡಿದರೆ ಬಿಜೆಪಿಗೆ ತೊಂದರೆಯಾಗುವ ಎಲ್ಲ ಸಾಧ್ಯತೆಗಳಿವೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಶ್ರೀಗಳು ನಗರಕ್ಕೆ ಆಗಮಿಸಿದ್ದ ಸಂದ ರ್ಭದಲ್ಲಿ ಪತ್ರಕರ್ತ ರೊಂದಿಗೆ ಮಾತನಾಡು ತ್ತಿದ್ದ ಅವರು, ರಾಜ್ಯದ ಎಲ್ಲಾ ಜನಾಂಗ ದವರಿಗೂ ನ್ಯಾಯ ದೊರಕಿಸಿಕೊಟ್ಟ ಯಡಿಯೂರಪ್ಪ ಬೆನ್ನಿಗೆ ಶ್ರೀಶೈಲ (3ನೇ ಪುಟಕ್ಕೆ)

### ಸಿಎಂ ಬದಲಾಯಿಸಿದರೆ ತೊಂದರೆ ಖಚಿತ



ಚಿತ್ರದುರ್ಗ, ಜು. 20 - ರಾಜ್ಯದ ಮುಖ್ಯ ಮಂತ್ರಿಗಳು ಬದಲಾದರೆ ಯಡಿಯೂರಪ್ಪ ನವರಿ ಗೇನು ನಷ್ಟ ಇಲ್ಲ. ಆದರೆ ಪಕ್ಷಕ್ಕೆ ದೊಡ್ಡ ನಷ್ಟ ಉಂಟಾಗಬಹುದು. ಇದ್ದಕ್ಕಿದ್ದಂತೆ ಒಬ್ಬ ನಾಯಕ ಹುಟ್ಟುವುದಿಲ್ಲ. ಅದು ನಿಧಾನವಾಗಿ ಬರುವ ಪ್ರಕ್ರಿಯೆ. ಆದರೆ ಯಡಿಯೂರಪ್ಪನವರನ್ನು ಮಧ್ಯದಲ್ಲಿ ಬದಲಾಯಿಸಿದರೆ ತೊಂದರೆಯಾಗು ವುದು ಖಚಿತ ಎಂದು ಡಾ. (3ನೇ ಪುಟಕ್ಕೆ)

# 6.66 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣ

## ಪರೀಕ್ಷಾ ರಹಿತ ಪಿಯು ಫಲಿತಾಂಶ ಪ್ರಕಟ, ದ.ಕನ್ನಡಕ್ಕೆ ಅಗ್ರ ಸ್ಥಾನ

ಬೆಂಗಳೂರು, ಜು. 20 - ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸಿರುವ ಶಿಕ್ಷಣ ಸಚಿವ ಸುರೇಶ್ ಕುಮಾರ್, ಈ ಬಾರಿ 6.66 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ರಹಿತವಾಗಿ ಉತ್ತೀರ್ಣರಾಗಿದ್ದಾರೆ ಎಂದು ಹೇಳಿದ್ದಾರೆ.

ದ್ವಿತೀಯ ಪಿಯುಸಿಯಲ್ಲಿ 6,66, 497 ವಿದ್ಯಾರ್ಥಿಗಳಿದ್ದರು, ಇದೇ ಮೊದಲ ಬಾರಿಗೆ ಪರೀಕ್ಷೆ ಇಲ್ಲದೆ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಲಾಗಿದೆ. ಇದರಲ್ಲಿ 3,35,138 ವಿದ್ಯಾರ್ಥಿಗಳು ಹಾಗೂ 3,31,359 ವಿದ್ಯಾರ್ಥಿನಿಯರಿದ್ದಾರೆ ಎಂದರು.

ಎಸ್‌ಎಸ್‌ಎಲ್‌ಸಿ ಅಂಕಗಳಲ್ಲಿ ಶೇ. 45 ಹಾಗೂ ಪ್ರಥಮ ಪಿಯುಸಿ ಪರೀಕ್ಷೆಯ ಶೇ. 45 ಹಾಗೂ ಆಂತರಿಕ ಮೌಲ್ಯ ಮಾಪನದ ಶೇ. 10 (3ನೇ ಪುಟಕ್ಕೆ)

### ಆ.10ರಂದು ಎಸ್ಸೆಸ್ಸೆಲ್ಸಿ ಫಲಿತಾಂಶ

**ಬೆಂಗಳೂರು, ಜು. 20 - ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಆಗಸ್ಟ್ 10 ಕ್ಕೆ ಪ್ರಕಟವಾಗಲಿದೆ ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಕೋವಿಡ್-19 ರ ಸಂಕಷ್ಟದಲ್ಲೂ ಹೊಸ ಮಾದರಿಯಲ್ಲಿ ಎರಡು ದಿನಗಳ ಕಾಲ ನಡೆಯುತ್ತಿರುವ ಪರೀಕ್ಷೆ ಫಲಿತಾಂಶವನ್ನು ಮೂರು ವಾರಗಳ ಅವಧಿಯೊಳಗೆ ಸರ್ಕಾರ ನೀಡುತ್ತಿದೆ. ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ಫಲಿತಾಂಶವನ್ನು ತ್ವರಿತವಾಗಿ ನೀಡಲಾಗುತ್ತಿದೆ ಎಂದವರು ಹೇಳಿದ್ದಾರೆ.**

### ಜಿಲ್ಲೆಯಲ್ಲಿ 19,906 ವಿದ್ಯಾರ್ಥಿಗಳು ಉತ್ತೀರ್ಣ

ದಾವಣಗೆರೆ, ಜು. 20- ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ ವಿದ್ಯಾರ್ಥಿಗಳು 17502 ಹಾಗೂ 2404 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 19906 ವಿದ್ಯಾರ್ಥಿಗಳೆಲ್ಲರೂ ಉತ್ತೀರ್ಣರಾಗಿದ್ದಾರೆ ಎಂದು ಪಿಯು ಡಿಡಿಪಿಐ ರಾಜು ಅವರು ಜನತವಾಣಿಗೆ ತಿಳಿಸಿದ್ದಾರೆ.

ಕಲಾ ವಿಭಾಗದ 5645 ವಿದ್ಯಾರ್ಥಿಗಳ ಪೈಕಿ 4846 ಹೊಸಬರು, 799 ಪುನರಾವರ್ತಿತ. ವಾಣಿಜ್ಯ ವಿಭಾಗದಲ್ಲಿ ಒಟ್ಟು 5276 ವಿದ್ಯಾರ್ಥಿಗಳ ಪೈಕಿ ಹೊಸಬರು 4534 ಹಾಗೂ 742 ಪುನರಾವರ್ತಿತ ಮತ್ತು ವಿಜ್ಞಾನ ವಿಭಾಗದ 8985 ವಿದ್ಯಾರ್ಥಿಗಳ ಪೈಕಿ 8122 ಹೊಸಬರು ಹಾಗೂ 863 ಪುನರಾವರ್ತಿತ ವಿದ್ಯಾರ್ಥಿಗಳೆಲ್ಲಾ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಈ ಫಲಿತಾಂಶ ತೃಪ್ತಿ ತರದೇ ಇದ್ದರೆ (3ನೇ ಪುಟಕ್ಕೆ)






# ರಸಗೊಬ್ಬರ ಕೃತಕ ಅಭಾವ ಸೃಷ್ಟಿಯಾಗದಂತೆ ಸೂಚನೆ



### ಜಗಳೂರು: ರಸಗೊಬ್ಬರ ಮಳಿಗೆಗಳ ತಪಾಸಣೆ

ಜಗಳೂರು, ಜು.20- ತಾಲ್ಲೂಕಿನಲ್ಲಿ ಮುಂಗಾರು ಹಂಗಾಮು ಚುರುಕಾಗಿದ್ದು, ಉತ್ತಮ ಮಳೆಯಾಗಿರುವುದರಿಂದ ಯೂರಿಯಾ ರಸಗೊಬ್ಬರದ ಕೃತಕ ಅಭಾವ ಸೃಷ್ಟಿಯಾಗದಂತೆ ರಸಗೊಬ್ಬರ ಮಾರಾಟ ಮಳಿಗೆಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಭೇಟಿ ನೀಡಿ ಸೂಚನೆ ನೀಡಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸುಲು ತಿಳಿಸಿದ್ದಾರೆ.

ಜು.19 ರಂದು ಕೃಷಿ ಇಲಾಖೆ ವತಿಯಿಂದ 6 ತಂಡಗಳ ಮೂಲಕ ಮೂರು ಹೋಬಳಿಗಳಿಗೆ ಒಟ್ಟು 44 ರಸಗೊಬ್ಬರ ಮಾರಾಟ ಮಳಿಗೆಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ (3ನೇ ಪುಟಕ್ಕೆ)

# ಬೆಸ ಸೆಮಿಸ್ಟರ್ ಪರೀಕ್ಷೆಗಳ ರದ್ದತಿಗೆ ಆಗ್ರಹ

## ದಾವಿವಿ ಮುಂಭಾಗ ಪ್ರತಿಭಟನೆ

ದಾವಣಗೆರೆ, ಜು.20- ಎರಡು ಉಚಿತ ಲಸಿಕೆ ಪೂರೈಸಿದ ನಂತರವೇ ಆಫ್‌ಲೈನ್ ಪರೀಕ್ಷೆ ಹಾಗೂ ತರಗತಿ ನಡೆಸಬೇಕು ಎಂದು ಆಗ್ರಹಿಸಿ ದಾವಣಗೆರೆ ವಿಶ್ವವಿದ್ಯಾಲಯದ ಮುಂಭಾಗದಲ್ಲಿ ಇಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್ ಓ) ನೇತೃತ್ವದಲ್ಲಿ ದಾವಣಗೆರೆ ವಿವಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದುಗೊಳಿಸಿ, ಅಂತಿಮ ಸೆಮಿಸ್ಟರ್‌ನ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿ, ದಾವಣಗೆರೆ ವಿವಿ ಕುಲಪತಿಗಳಿಗೆ ಮನವಿ ಸಲ್ಲಿಸಿದರು. ರಾಜ್ಯದ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ (3ನೇ ಪುಟಕ್ಕೆ)

**ಭದ್ರಾ ಡ್ಯಾಂ**

ಇಂದಿನ ಮಟ್ಟ : 165 ಅಡಿ 7 ಇಂಚು
ಒಳ ಹರಿವು: 12355 ಕ್ಯೂಸೆಕ್ಸ್
ಹೊರ ಹರಿವು : 793 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 152.4 ಅಡಿ

# ಬಿಜೆಪಿ ಆಂತರಿಕ ವ್ಯವಹಾರದಲ್ಲಿ ಕಾಂಗ್ರೆಸ್ ಹಸ್ತಕ್ಷೇಪ

**ಧರ್ಮ ವಿಭಜನೆ ಯತ್ನ ನೆನಪಿಸಿದ ಬಿಜೆಪಿ**

ಬೆಂಗಳೂರು, ಜು. 20 - ಬಿಜೆಪಿಯ ಆಂತರಿಕ ವ್ಯವಹಾರದಲ್ಲಿ ಕಾಂಗ್ರೆಸ್ ನಾಯಕರು ಮೂಗು ತೂರಿಸುತ್ತಿರುವುದಕ್ಕೆ ಪಕ್ಷ ಬಲವಾಗಿ ಆಕ್ಷೇಪ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬದಲಾವಣೆ ಆಗಲಿದೆ ಎಂಬ ಸುದ್ದಿ ಹರಡುತ್ತಿದ್ದಂತೆ, ಕಾಂಗ್ರೆಸ್ ವೀರಶೈವ ಮುಖಂಡರು ಹೇಳಿಕೆಗಳನ್ನು ನೀಡಿ, ಸಮಾಜವನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ಪರೋಕ್ಷವಾಗಿ ಟ್ವೀಟ್ (3ನೇ ಪುಟಕ್ಕೆ)

# ಎಸ್‌ಸಿ, ಎಸ್‌ಟಿ ಹೊರತು ಪಡಿಸಿ ಉಳಿದವರ ಜಾತಿ ಗಣತಿ ಇಲ್ಲ

ನವದೆಹಲಿ, ಜು. 20 - ಪರಿಶಿಷ್ಟ ಜಾತಿ ಹಾಗೂ ಪಂಗಡದ ವರನ್ನು ಹೊರತು ಪಡಿಸಿ ಉಳಿದಂತೆ ಜಾತಿ ಗಣತಿ ನಡೆಸಬಾರದು ಎಂಬುದು ಸರ್ಕಾರದ ನೀತಿಯಾಗಿದೆ ಎಂದು ಲೋಕಸಭೆಗೆ ಮಾಹಿತಿ ನೀಡಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರೈ, ಸಂವಿಧಾನದ ನಿಯಮಗಳ ಪ್ರಕಾರ (3ನೇ ಪುಟಕ್ಕೆ)


## ಪ್ರಥಮ ವರ್ಷದ ನೆನಹು



ಜನನ : 18 ಏಪ್ರಿಲ್ 1947

ಲಿಂಗೈಕ್ಯ : 21 ಜುಲೈ 2020

**ದಿ|| ಶ್ರೀ ಡಿ. ಕೊಟ್ರಪ್ಪ** ನಿವೃತ್ತ ಫಾರ್ಮಾಸಿಸ್ಟ್

ನೀವು ಲಿಂಗೈಕ್ಯರಾಗಿ ಇಂದಿಗೆ ಒಂದು ವರ್ಷ. ತಮ್ಮ ಅಖಂಡ ಜೀವನ ಪ್ರೀತಿಯ ಚೈತನ್ಯದ ಚಿಲುಮೆ, ಶಿಸ್ತು, ಆರೋಗ್ಯ ಪ್ರಜ್ಞೆ, ಸಮಕಳೆ, ಸಮಭಾವ, ಸಮದರ್ಶಿತ್ವದ ಸದಾಶಯದ ಹಾದಿಯಲ್ಲಿ ಪಯಣಿಸುವ ಸಂಕಲ್ಪದಲ್ಲಿ

ಶ್ರೀಮತಿ ಎಸ್. ಲೀಲಾ, ನಿವೃತ್ತ ಮುಖ್ಯ ಶಿಕ್ಷಕರು
ಶ್ರೀಮತಿ ಸೌಮ್ಯ, ಶ್ರೀ ಕೆ. ಗಣೇಶ್, ಸಹಾಯಕ ಪ್ರಾಧ್ಯಾಪಕರು, E&C ವಿಭಾಗ, ಬಿಐಇಟಿ, ದಾವಣಗೆರೆ.
ಶ್ರೀಮತಿ ವಿನುತ, ಕೆ. ಶ್ರೀ. ರವಿಶೇಖರ್, ಸಿವಿಲ್ ಎಂಜಿನಿಯರ್
ಶ್ರೀಮತಿ ಮಮತ, ಶ್ರೀ ವಿ. ನಟರಾಜ್, ಗಣಿತ ಉಪನ್ಯಾಸಕರು, ಸಿದ್ಧಗಂಗಾ ಪ.ಪೂ. ಕಾಲೇಜು
ಮೊಮ್ಮಕ್ಕಳಾದ: ಚಿ|| ವೃಷಾಂಕ್, ಚಿ|| ಚಂದ್ರಚೂಡ,
ಚಿ|| ಪ್ರಮಥ್, ಚಿ|| ಕೊಟ್ಟೂರು ಬಸವರಾಜ್, ಮೊ. : 96206 59856

**ಕಾರು ಮಾರಾಟಕ್ಕೆ ಬೇಕಿದೆ**
Contact for Used Cars
Buying & Selling
8 ವರ್ಷದೊಳಗಿನ
ಯಾವುದೇ ಕಂಪನಿಯ ಕಾರುಗಳು.
ಕಿರಣ್ ಬೂಸ್ನೂರ್ : 97315-63409

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ ಆದ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ನಲ್ಲಿ ಅನುಭವ ಇರುವ ಯುವತಿ ಬೇಕಾಗಿದ್ದಾರೆ. ಸಂಪರ್ಕಿಸಿ
98449 69738

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ ದಾನಿಗಳು
ಡಾ. ಉಪಾಸಿ. ಪಿ.ಎಂ.
ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ Bsc/ MSc (CBZ) ಆಗಿರುವ ಯುವಕ/ಯುವತಿಯರು ಲ್ಯಾಬ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು ರಸ್ತೆ, ಶಾಮನೂರು, ದಾವಣಗೆರೆ.
ಮೊ: 94481 10287

**ಸೈಟ್ ಮಾರಾಟಕ್ಕೆ**
ಶಾಮನೂರು ಡಾಲರ್ಸ್ ಕಾಲೋನಿ 40×59 ಉತ್ತರ
ಕಿರಣ್ ಬೂಸ್ನೂರ್
98440-63409

**3 BHK ಮನೆ ಬಾಡಿಗೆಗೆ ಇದೆ**
4ನೇ ಕ್ರಾಸ್, ಎಲ್.ಐ.ಸಿ. ಕಾಲೋನಿ, #1891/24 ಪೂರ್ವ ಫೇಸಿಂಗ್, ವಾಸ್ತು ಪ್ರಕಾರ ನೂತನ ಕಾಲೇಜ್ ಹಿಂಭಾಗ, ದಾವಣಗೆರೆ.
99863 71175, 99869 98400

**ಮನೆ ಬಾಡಿಗೆಗೆ ಇದೆ**
ಶ್ರೀನಿವಾಸ ನಗರ, 2ನೇ ಕ್ರಾಸ್, ಹದಡಿ ರಸ್ತೆ, ಪ್ರಗತಿ ಕಾಂಕ್ರೀಟ್ಸ್ ಪಕ್ಕ, 1ನೇ ಫ್ಲೋರ್, 3 ಬೆಡ್ ರೂಂ, ಬೋರ್‌ವೆಲ್ ನೀರಿನ ಸೌಲಭ್ಯವಿದೆ.
(ಸಸ್ಯಹಾರಿಗಳಿಗೆ ಮಾತ್ರ)
ಫೋ. : 90087 35818

**ಮಾರಾಟಕ್ಕೆ**
ಎಸ್.ಎಸ್.ಲೇಔಟ್‌ನಲ್ಲಿ 30x40 (ಪೂರ್ವ) ಡೂಪ್ಲೆಕ್ಸ್ ಮನೆ, ಶಿವ ಪಾರ್ವತಿ ಲೇಔಟ್ 30x40 (ಪಶ್ಚಿಮ) ಸೈಟು, ಸರಸ್ವತಿ ನಗರ 30x40 (ಪೂರ್ವ) ಮನೆ, ವಿವೇಕಾನಂದ ಬಡಾವಣೆ 40x70 (ಪೂರ್ವ) ಸೈಟು, ಶಕ್ತಿನಗರ 30x50 (ಪೂರ್ವ) ಡೂಪ್ಲೆಕ್ಸ್ ಮನೆ, ಚಿಕ್ಕಮ್ಮಣ್ಣಿ 20x30 (ಪೂರ್ವ) 3 ಫ್ಲೋರ್ ಮನೆ ಮಾರಾಟಕ್ಕಿದೆ.
98804 40602

**ವಾಸ್ತು ಮನೆ& ಶಾಪ್ ಬಾಡಿಗೆಗೆ**
ಶಾಪ್ ಮತ್ತು ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ ಮನೆ 2/3 ಬೆಡ್ ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಸಮೃದ್ಧಿ ನಿಲಯ # 408, 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ ಮೋದಿ ಕಾಂಪೌಂಡ್ ಹತ್ತಿರ, ದಾವಣಗೆರೆ
95386 41980, 93807 97651

**ಗಿಡಗಳು ದೊರೆಯುತ್ತವೆ**
ನಮ್ಮಲ್ಲಿ ಕ್ರಾಸಿಂಗ್ ಮಾಡಿದ ತ್ಯಾಗದ ಗಿಡಗಳು, ತೆಂಗು, ಶ್ರೀಗಂಧ, ರಕ್ತ ಚಂದನ, ಮಾವು, ಸಪೋಟ, ಜಂಬು ನೇರಳೆ, ಪೇರಲ ಗಿಡಗಳು ದೊರೆಯುತ್ತವೆ. ಡೋರ್ ಡಿಲೆವರಿ ಕೊಡಲಾಗುವುದು. ಸಂಪರ್ಕಿಸಿ:
98458 01330

**ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ಸ್, ಸೇಲ್ಸ್ ಮೆನ್, ಕಂಪ್ಯೂಟರ್ ಆಪರೇಟರ್
ಸಂಪರ್ಕಿಸಿ
87622 21697

**ಬೇಕಾಗಿದ್ದಾರೆ**
Cafe ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಸಂಬಳ ರೂ. 8,000 ರಿಂದ 15,000ವರೆಗೆ + ಪ್ರೋತ್ಸಾಹ ಧನವಿರುತ್ತದೆ. ಸಂಪರ್ಕಿಸಿರಿ :
70197 64596

**ಮಳಿಗೆ ಬಾಡಿಗೆಗೆ**
ಪೂರ್ವ ಮುಖದ ಆರ್.ಸಿ.ಸಿ. ಮಳಿಗೆ, ಎನ್.ಆರ್.ರಸ್ತೆ, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ
ಸಂಪರ್ಕಿಸಿ :
98809 55777

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 8000/-
ಊಟ, ರೂಂ ಉಚಿತ
97400 98047, 97400 98064

ರೈತ ಬಾಂಧವರೇ ಮೆಕ್ಕೆಜೋಳದ ಬೆಳೆಯಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಮತ್ತು ಮೆಕ್ಕೆಜೋಳದ ಬೆಳೆಯ ರೋಗಬಾಧೆ ಮತ್ತು ಕೀಟಗಳಿಗೆ ಯಾವ ಔಷಧಿಯನ್ನು ಸಿಂಪಡಿಸಬೇಕೆಂದು ಹೆಚ್ಚಿನ ಮಾಹಿತಿಯನ್ನು ಕೊಡಲಾಗುವುದು ಸಂಪರ್ಕಿಸಿ
ಸುನಿಲ್: 98451 04109

**COMMERCIAL SITE FOR SALE**
Site No. 8, size 20x80 Gujari layout maganahally main road (double road) opposite, aqsa masjid complex near, JDS office, Davangere.
83106 39057

**ಬೇಕಾಗಿದ್ದಾರೆ**
ಟೈಲರ್ಸ್, ಹೆಲ್ಪರ್ಸ್, ಚೆಕ್ಕರ್ಸ್, ಕಟಿಂಗ್ ಹೆಲ್ಪರ್ಸ್, ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಪರ್ಕಿಸಿ
ಲಾರೆನ್ಸ್ ಕ್ಲಾತಿಂಗ್ ಪ್ರೈ.ಲಿ.
ಎಂ.ಎಸ್.ಆರ್. ಟೆಕ್ಸ್‌ಟೈಲ್ಸ್
#58 ಎ, ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
88848 35899, 98444 25123

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
(Prefered Main Road)
74112 50447

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30x57+56=1695 ಅಳತೆಯ ನಿವೇಶನ ಮಾರಾಟಕ್ಕಿದೆ. (ದಕ್ಷಿಣ ಮುಖ) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳಿವೆ.
ಸಂಪರ್ಕಿಸಿ :
ಮೊ: 99006 37763

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**Duda Approved**
sites at Just Rs. 4 Laks in Harihara.
Limited sites only.
80886 73838

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 ಬೆಡ್‌ರೂಂ, ಕಾರ್ಪೋರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 1ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ:
93410 12022

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಹತ್ತಿರ ಸಿಂಗಲ್ ಬೆಡ್ ರೂಂ ಮನೆ ಮತ್ತು ಒಂದು ರೂಂ (ಸಸ್ಯಹಾರಿಗಳಿಗೆ) ಬಾಡಿಗೆಗೆ ಇದೆ.
94499 42404
79751 07721

**ಮನೆ ಬಾಡಿಗೆಗೆ ಇದೆ**
ಕಿರುವಾಡಿ ಲೇಔಟ್, ತ್ರಿಶೂಲ್ ಟಾಕೀಸ್ ಹಿಂಭಾಗ, 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
94481 29655

**ಬಾಡಿಗೆಗೆ/ಲೀಸ್‌ಗೆ**
ಸಿಂಗಲ್ ಬೆಡ್ ರೂಂ ಮನೆ #1928/74, 'ಚೈತ್ರ ನಿವಾಸ' ಬಾಪೂಜಿ ಎಂಬಿಎ ಕಾಲೇಜ್, ಮೇನ್ ರೋಡ್, ದಾವಣಗೆರೆ.
ಮೊ: 94484 39667

**ಬೇಕಾಗಿದ್ದಾರೆ**
ಕುರಿ ಫಾರ್ಮ್‌ನಲ್ಲಿ ಕೆಲಸ ಮಾಡಲು ಕುಟುಂಬ ಕೆಲಸಗಾರರು ಬೇಕಾಗಿದ್ದಾರೆ ಹಾಗು ಕುರಿಗಳು ಮಾರಾಟಕ್ಕಿದೆ. 350 per kg
94482 29430

**ನೀವು ಕಂಪ್ಯೂಟರ್ ಕಲಿಯಬೇಕಾ?**
1 ವರ್ಷ, 6 ತಿಂಗಳು, 4 ತಿಂಗಳ ಕೋರ್ಸ್‌ಗಳನ್ನು ಕಲಿಯಲು ಈಗಲೇ ಸಂಪರ್ಕಿಸಿ : MCC B ಬ್ಲಾಕ್, ದಾವಣಗೆರೆ.
95910 78215

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಡಿಸೈನಿಂಗ್, ಟೈಪಿಂಗ್ ಹಾಗೂ ಅಕೌಂಟ್ಸ್ ಅನುಭವವುಳ್ಳವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜ್ ಪ್ರಿಂಟರ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.
99640 28818, 9742774340

**ಹುಡುಗರು ಬೇಕಾಗಿದ್ದಾರೆ**
ಮನೆ ಮನೆಗೆ ಪಾಂಪ್ಲೆಟ್ಸ್ ಹಂಚಲು ಹುಡುಗರು ಬೇಕಾಗಿದ್ದಾರೆ. ಫುಲ್ ಟೈಂ, ವೇತನ ರೂ. 4,000/-
ಸಂಪರ್ಕಿಸಿ :
ಮೊ.: 79752 01572

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**SSLC / PUC / Degree ಪಾಸ್/ಫೇಲ್ ಮುಂದೇನು?**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್-2ವರ್ಷ. ಕೇವಲ 6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಗಂಗೋತ್ರಿ ಕಮ್ಯುನಿಟಿ ಕಾಲೇಜ್ (ರಿ)
ಬಂಧನ್ ಬ್ಯಾಂಕ್ ಹತ್ತಿರ, ಲಾಯರ್ ರೋಡ್, ದಾವಣಗೆರೆ
86602 35013

**ಮಾರಾಟಕ್ಕೆ ಇದೆ**
ವಿದ್ಯಾನಗರದ ನೂತನ ಕಾಲೇಜು ರಸ್ತೆಯಲ್ಲಿ ಎಂಟು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಸುಸಜ್ಜಿತವಾದ ಸ್ಟಾರ್ ಮಾರ್ಟ್‌ಎಂಬ ಸೂಪರ್ ಮಾರ್ಕೆಟ್ ಮಾರಾಟಕ್ಕಿದೆ.
97384 19888, 80951 70644

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ST. JOSEPH TIMES**
CHURCH ROAD, P.J. EXTENSION, RAM & CO CIRCLE, DAVANGERE.
Mob. : 9632002486
SMART CITY, SMART OFFER
OLD WATCH EXCHANGE OFFER
30% DISCOUNT
ನಿಮ್ಮ ಯಾವುದೇ ಹಳೆಯ ವಾಚ್‌ಗಳನ್ನು ತೆಗೆದುಕೊಂಡು ಪ್ರಸಿದ್ಧ ಕಂಪನಿಯ ಹೊಸ ವಾಚ್‌ಗಳನ್ನು
ಶೇಕಡಾ 30% ರಿಯಾಯಿತಿ
ದರದಲ್ಲಿ ಕೊಡಲಾಗುವುದು ಹಾಗೂ ನಮ್ಮಲ್ಲಿ ವೇಯಿಂಗ್ ಮಿಷನ್ ಸೆಲ್ಲುಗಳು, ಕಾರ್ ರಿಮೋಟ್ ಸೆಲ್ಲುಗಳು, ಕಂಪ್ಯೂಟರ್ ಸೆಲ್ಲುಗಳು, ಹಾಗೂ ಹಿಯರಿಂಗ್ ಮಿಷಿನ್ ಸೆಲ್ಲು ಹಾಗೂ ಶುಗರ್ ಚೆಕ್ ಮೆಷಿನ್ ಸೆಲ್ಲುಗಳು ನಮ್ಮಲ್ಲಿ ದೊರೆಯುತ್ತವೆ.

**WANTED**
Boys required for computer billing/ data entry work at Food Mart Supermarket.
Quali: B.com:
Mob: 98864 64531

**ಮನೆ ಬಾಡಿಗೆಗಿದೆ**
ಬಾಲಾಜಿ ನಗರ, ಪಾರ್ಕ್ ಎದುರು, ಕುಂದುವಾಡ ರಸ್ತೆ, # 3616/154 ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
ಫೋ.:94817 21551

**ಜಂಗಮ ವರ ಬೇಕಾಗಿದೆ**
ಜಂಗಮ, ಆರ್ಥಿಕವಾಗಿ ಹಿಂದುಳಿದ 28 ವರ್ಷದ ಬಿ.ಇ. ಪದವಿ ವಧುವಿಗೆ, ಯಾವುದೇ ಅಪೇಕ್ಷೆಯಿಲ್ಲದ, ವಿಶಾಲ ಭಾವನೆಯುಳ್ಳ ನೌಕರಿಯಲ್ಲಿರುವ ಅಥವಾ ಸ್ವಂತ ಉದ್ಯೋಗದಲ್ಲಿರುವ ವರ ಬೇಕಾಗಿದೆ.
98807 29108

**GANGOTRI PLAZA COMMERCIAL BUILDING FOR RENT**
@ Mama's Joint Road, Opp. Shilpa Diagnostic, MCC 'B' Block, Davangere.
1st Floor 1600 Sq.ft.
2nd Floor 1600 Sq.ft
Basement 1300 Sq.ft
Lift facility available.
NORTH FACE BUILDING
98455 55098

**ತಕ್ಷಣ ಬೇಕಾಗಿದ್ದಾರೆ**
ಬಿಲ್ಲಿಂಗ್ ಆಪರೇಟರ್
ಕ್ಯಾಷಿಯರ್
ಲಿಕ್ಕರ್ ಪ್ಯಾರಡೈಸ್
ಶಾಮನೂರು ರಸ್ತೆ, ದಾವಣಗೆರೆ
ಸಂಪರ್ಕಿಸಿ: 70191 37858

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಡೆಲಿವರಿ ಬಾಯ್ ಕೆಲಸ ಮಾಡಲು ಮತ್ತು ಕಂಪ್ಯೂಟರ್ ಜ್ಞಾನ ಇರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
97385 23711

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**Required**
Sales Executive & Delivery Boy
(Own Vehicle compulsory )
Ph No : 9844493755

ಓದುಗರ ಗಮನಕ್ಕೆ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗು ತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ತಾಲ್ಲೂಕಿನಲ್ಲಿ ಯೂರಿಯಾ ಕೊರತೆ ಇಲ್ಲ

## ರಾಣೇಬೆನ್ನೂರಿನಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಕೃಷಿ ಅಧಿಕಾರಿ ಸ್ಪಷ್ಟನೆ



ರಾಣೇಬೆನ್ನೂರು, ಜು.20- ತಾಲ್ಲೂಕಿನಲ್ಲಿ ವಾಡಿಕೆಗಿಂತ ಮಳೆ ಹೆಚ್ಚಾಗಿದ್ದರಿಂದ ಯೂರಿಯಾ ಗೊಬ್ಬರದ ಬೇಡಿಕೆ ಹೆಚ್ಚಾಗಿದೆ. ಅಗತ್ಯವಿರುವಷ್ಟು ಗೊಬ್ಬರ ಗುರುವಾರ ಬರಲಿದೆ. ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗುವುದಿಲ್ಲ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಹಿತೇಂದ್ರ ಗೌಡಪ್ಪಳವರ ಹೇಳಿದರು.


ಯೂರಿಯಾ ಗೊಬ್ಬರ ಕೊರತೆಯಾಗಿಲ್ಲ. ಹಲಗೇರಿ ಮತ್ತು ಬೆನಕನಕೊಂಡ ಭಾಗದಲ್ಲಿ ದೂರುಗಳು ಬಂದಿದ್ದರೂ ಸಹ ರೈತರಿಗೆ ತೊಂದರೆ ಆಗದಂತೆ ಸಮಸ್ಯೆಯನ್ನು ಸರಿಪಡಿಸಲಾಗಿದೆ. ಉಳಿದಂತೆ ತಾಲ್ಲೂಕಿನಲ್ಲಿ ಯಾವುದೇ ದೂರುಗಳಿಲ್ಲ ಎಂದು ಅವರು ಹೇಳಿದರು.

ಇಂದು ನಡೆದ ಕೆಡಿಪಿ ಸಭೆಯಲ್ಲಿ ಇಲಾಖೆಯ ಪ್ರಗತಿ ವಿವರಿಸುತ್ತಿದ್ದ ಅವರು ಈ ಬಾರಿ 42,661 ಹೆಕ್ಟೇರ್ ಗೋವಿನಜೋಳ ಬಿತ್ತನೆ ಆಗಿದೆ. ಪ್ರತಿ ವರ್ಷಕ್ಕಿಂತ ಈ ಬಾರಿ ಗೋವಿನಜೋಳ 4 ಸಾವಿರ ಹೆಕ್ಟೇರ್‌ನಷ್ಟು ಹೆಚ್ಚು ಬಿತ್ತನೆ ಆಗಿದೆ ಎಂದರು.

**ವ್ಯಾಕ್ಸಿನ್:** ಈಗಾಗಲೇ 62 ಸಾವಿರ ನಾಗರಿಕರಿಗೆ ಮೊದಲನೆ ಡೋಸ್, 13 ಸಾವಿರ ಜನರಿಗೆ ಎರಡನೆ ಡೋಸ್, 7,400 ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಇತರೆ ಸಿಬ್ಬಂದಿಗೆ ವ್ಯಾಕ್ಸಿನ್ ಹಾಕಲಾಗಿದೆ. ಒಟ್ಟು ನಗರಕ್ಕೆ 3 ಲಕ್ಷ ಬೇಕಾಗಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ಸಂತೋಷ್ ಆರೋಗ್ಯ ಇಲಾಖೆ ಪ್ರಗತಿ ವಿವರಿಸಿದರು.

ಶಾಸಕದ್ವಯರಾದ ಅರುಣಕುಮಾರ ಪೂಜಾರ ಹಾಗೂ ವಿರುಪಾಕ್ಷಪ್ಪ ಬಳ್ಳಾರಿ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಕಾರ್ಯನಿರ್ವಾಹಕ ಅಧಿಕಾರಿ ಟಿ.ಆರ್. ಮಲ್ಲಾಡದ ಪಾಲ್ಗೊಂಡಿದ್ದರು. ಅಕ್ಷರ ದಾಸೋಹದ ಲಿಂಗರಾಜ ಸುತ್ತಕೋಟಿ ಸ್ವಾಗತಿಸಿದರು. ಮ್ಯಾನೇಜರ್ ಬಸವರಾಜ ಶಿಡೇನೂರ ವಂದಿಸಿದರು.

# ಮಳೆ ಹಾನಿ ಪ್ರದೇಶಕ್ಕೆ ಶಾಸಕ ರಾಮಚಂದ್ರಪ್ಪ ಭೇಟಿ



**ಹರಪನಹಳ್ಳಿ**

ಹರಪನಹಳ್ಳಿ, ಜು.20 - ತಾಲ್ಲೂಕಿನ ಅರಸೀಕೆರಿ ಹೋಬಳಿಯ ಉಚ್ಚಂಗಿದುರ್ಗ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇತ್ತೀಚಿಗೆ ಸುರಿದ ಭಾರೀ ಮಳೆಯಿಂದಾಗಿ ಹಾನಿಗೊಳಗಾದ ಪ್ರದೇಶಗಳಿಗೆ ವಾಲ್ಮೀಕಿ ಅಭಿವೃದ್ದಿ ನಿಗಮದ ಅಧ್ಯಕ್ಷ ಶಾಸಕ ಎಸ್.ವಿ. ರಾಮಚಂದ್ರಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಚಟ್ನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರೆಮಾಗಾನಹಳ್ಳಿ, ಚಟ್ನಿಹಳ್ಳಿ, ನರೇಬೊಮ್ಮನಹಳ್ಳಿ, ರಾಮಘಟ್ಟ, ಫಣಿಯಾಪುರ, ಉಚ್ಚಂಗಿದುರ್ಗದ ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಹಾನಿಗೊಳಗಾದ ತೋಟಗಾರಿಕೆ ಫಸಲು ಹಾಗೂ ಇತರೆ ಬೆಳೆಗಳನ್ನು ಪರಿಶೀಲಿಸಿದರು. ಜತೆಗೆ ಸ್ಥಳದಲ್ಲೇ ಇದ್ದ ತಹಶೀಲ್ದಾರ್ ಎಲ್. ಎಂ.ನಂದೀಶ್ ಹಾಗೂ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಜಯಸಿಂಹ ಅವರಿಗೆ ಸಮೀಕ್ಷೆ ನಡೆಸಿ ಹಾನಿಯ ಅಂದಾಜು ಹಾಗೂ ಪ್ರಕೃತಿ ವಿಕೋಪ ಪರಿಹಾರ ಯೋಜನೆ ಅಡಿ ಪರಿಹಾರಕ್ಕಾಗಿ ಕೂಡಲೇ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಮಳೆಯಿಂದಾಗಿ ಮನೆ ಹಾಗೂ ಮೇಕೆಗಳನ್ನು ಕಳೆದು ಕೊಂಡ ಸಂತ್ರಸ್ತ ಮನೆಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಾಂತ್ವನದ ಧೈರ್ಯ ತುಂಬಿದ ಶಾಸಕರು ಬಳಿಕ ಎಲ್ಲಾ ಸಂತ್ರಸ್ತ ಕುಟುಂಬಗಳಿಗೂ ತಲಾ 10 ಸಾವಿರದಂತೆ ವೈಯಕ್ತಿಕ ಪರಿಹಾರವನ್ನು ಸ್ಥಳದಲ್ಲಿಯೇ ನೀಡಿದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಫಾತೀಮಾ, ಇಂಜಿನಿಯರ್ ಮಂಜುನಾಥ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಮತಾ, ಅಭಿವೃದ್ದಿ ಅಧಿಕಾರಿ ಸಂಗಪ್ಪ, ಉಮೇಶ, ತಾಲ್ಲೂಕು ಪಂಚಾಯಿತಿ ಸದಸ್ಯ ಪಿ. ಕೆಂಚನಗೌಡ, ಮುಖಂಡರಾದ ಚಟ್ನಿಹಳ್ಳಿ ರಾಜಪ್ಪ, ಫಣಿಯಾಪುರ ಲಿಂಗರಾಜ, ಅಜ್ಜಯ್ಯ, ಉಚ್ಚಂಗಿದುರ್ಗದ ರವಿಗೌಡ, ಎಸ್.ಹನುಮಂತಪ್ಪ, ಕಮ್ಮತ್ತಹಳ್ಳಿ ಸಿದ್ದಣ್ಣ ಸೇರಿದಂತೆ, ಇತರರು ಇದ್ದರು.

# 15-20 ದಿನಗಳಲ್ಲಿ ಭರಮಸಾಗರ ದೊಡ್ಡ ಕೆರೆಗೆ ಭದ್ರಾ ನೀರು

ಭರಮಸಾಗರ, ಜು.20- ಜನಪ್ರಿಯ ಪಾಳೆಗಾರ ಮದಕರಿನಾಯಕ ವಂಶದ ಭರಮಣ್ಣ ನಾಯಕ ನಿರ್ಮಿಸಿದ ಐತಿಹಾಸಿಕ ಭರಮಸಾಗರ ದೊಡ್ಡಕೆರೆಗೆ ಇನ್ನೇನು ಕೇವಲ 20-25 ದಿನಗಳ ಅಂತರದಲ್ಲಿ ಭದ್ರಾ ನೀರು ಹರಿದು ಬರಲಿದೆ ಎಂದು ಶಾಸಕ ಎಂ. ಚಂದ್ರಪ್ಪ ಹೇಳಿದರು.

**ಶಾಸಕ ಎಂ. ಚಂದ್ರಪ್ಪ**

ಭರಮಸಾಗರ ದೊಡ್ಡಕೆರೆ ಬಳಿ ಜಾಕ್‌ವೆಲ್-2ರ ಕಾಮಗಾರಿ ವೀಕ್ಷಿಸಿದ ಶಾಸಕರು, ಈ ವಿಷಯ ತಿಳಿಸಿದರಲ್ಲದೇ, ಭರಮಸಾಗರ ದೊಡ್ಡಕೆರೆಯನ್ನು ಉತ್ತಮ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಬಹುಕೋಟಿ ವೆಚ್ಚದ ಏತ ನೀರಾವರಿ ನೀರು ತುಂಬಿಸುವ ಯೋಜನೆಯ ಕಾಮಗಾರಿಯ ಮೊದಲ ಹಂತ ಶೇ 85ರಷ್ಟು ಪೂರ್ಣಗೊಂಡಿದೆ.

ಆನಗೋಡು-ಹೆಬ್ಬಾಳು ಭಾಗದಲ್ಲಿ ಸಣ್ಣಪುಟ್ಟ ರೈತರ ಹಾಗು ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯಿಂದಾಗಿ ಕಾಮಗಾರಿ ಕೊಂಚ ಹಿನ್ನಡೆ ಕಂಡಿದೆ. ಶೀಘ್ರ ಇವನ್ನೆಲ್ಲಾ ಪರಿಹರಿಸಿ, ಯೋಜಿತ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಶಾಸಕರು ಮಾಧ್ಯಮ ಮಿತ್ರರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಶಾಸಕರ ಅಭಿವೃದ್ಧಿ ಕಾರ್ಯಕ್ಕೆ ಸದಾ ಬೆಂಬಲ ವ್ಯಕ್ತಪಡಿಸುವ ಗ್ರಾಮದ ಹಿರಿಯ ಮುಖಂಡ, ಜಿ.ಪಂ. ಸದಸ್ಯ ಡಿ.ವಿ ಶರಣಪ್ಪ, ಕೋಗುಂಡೆ ಮಂಜಣ್ಣ, ಚವಲಿಹಳ್ಳಿ ಶೈಲೇಶ್, ಸಾಮಿಲ್ ಶಿವಣ್ಣ, ಲಾಯರ್ ಪಣಿಯಪ್ಪ, ಎಸ್. ನಾರಾಯಣರಾವ್, ಎ. ಎಸ್. ಸಿದ್ದಲಿಂಗಪ್ಪ, ಅನಂತಪದ್ಮನಾಭರಾವ್ ಮತ್ತಿತರರು ಉಪಸ್ಥಿತರಿದ್ದರು.

# ಕೂಡ್ಲಿಗಿ: ಪತ್ರಕರ್ತರಿಗೆ ಐಡಿ ಕಾರ್ಡ್ ವಿತರಣೆ



ಕೂಡ್ಲಿಗಿ, ಜು.20- ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಐಡಿ ಕಾರ್ಡ್ ವಿತರಿಸಲಾಯಿತು.

ಕೂಡ್ಲಿಗಿ ರಾಜ್ಯ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ಬಂಗ್ಲೆ ಮಲ್ಲಿಕಾರ್ಜುನ್, ಜಿಲ್ಲಾ ಕಾರ್ಯದರ್ಶಿ ಗಜಾಪುರ ಭೀಮಣ್ಣ, ತಾಲ್ಲೂಕು ಅಧ್ಯಕ್ಷ ಕೆ. ನಾಗರಾಜ, ಕಾವಲಿ ಶಿವಪ್ಪನಾಯಕ, ಬಿ. ನಾಗರಾಜ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಸದಸ್ಯರನ್ನಾಗಿ ಎಂ. ಮಂಜುನಾಥ (ಮಯೂರ ) ಮತ್ತು ಸುನಿಲ್ ಗೌಡ್ರು ಇವರನ್ನು ಸಂಘದ ಐಡಿ ಕಾರ್ಡ್ ನೀಡಿ ಸಂಘಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತು.

ರಾಜ್ಯ ಕಾರ್ಯದರ್ಶಿ ಬಂಗ್ಲೆ ಮಲ್ಲಿಕಾರ್ಜುನ್ ಸಂಘದ ಸಿದ್ಧಾಂತಗಳನ್ನು ತಿಳಿಯಪಡಿಸಿ, ಸಂಘಕ್ಕೆ ಯಾವುದೇ ಕಳಂಕ ಬರುವ ಹಾಗೆ ನಡೆದು ಕೊಂಡರೆ ಅಂತಹವರನ್ನು ತಕ್ಷಣದಿಂದ ಉಚ್ಚಾಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

# ಒಡೆದ ನೀರಿನ ಪೈಪ್ ರಿಪೇರಿಗೆ ಆಗ್ರಹ



**ಹರಿಹರ**


ಹರಿಹರ, ಜು.20- ನಗರದ ಶಿವಮೊಗ್ಗ ರಸ್ತೆಯಲ್ಲಿ ಹೈಸ್ಕೂಲ್ ಬಡಾವಣೆ, ವಿದ್ಯಾನಗರ, ಸೇರಿದಂತೆ ಅನೇಕ ಬಡಾವಣೆಗಳಿಗೆ ಸರಬರಾಜು ಆಗುವ 24/7 ನೀರಿನ ಪೈಪ್ ಒಡೆದುಕೊಂಡು ನೀರು ರಸ್ತೆ ಹಾಗೂ ಚರಂಡಿಯಲ್ಲಿ ತುಂಬಿ ಹರಿಯುತ್ತಿದ್ದರೂ, ನಗರಸಭೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದು, ಪೈಪನ್ನು ಆದಷ್ಟು ಬೇಗನೆ ದುರಸ್ತಿ ಪಡಿಸುವಂತೆ ಸಾರ್ವಜನಿಕರು ಆಗ್ರಹಿಸಿದರು.

ನಗರದ ಹೊರವಲಯದ ನೀರು ಸರಬರಾಜು ಕೇಂದ್ರದಿಂದ ನಗರದ ಹೈಸ್ಕೂಲ್ ಬಡಾವಣೆ, ವಿದ್ಯಾನಗರ, ಕಾಳಿದಾಸ ನಗರ, ಬೆಂಕಿನಗರ, ಮೋಚಿ ಕಾಲೋನಿ ಸೇರಿದಂತೆ ಹಲವಾರು ಬಡಾವಣೆಯ ಜನತೆಗೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಪೈಪ್ ಮೂಲಕ ನಗರದ ನೀರು ಸರಬರಾಜು ಕೇಂದ್ರದಿಂದ ಶಿವಮೊಗ್ಗ ರಸ್ತೆಯ ಮೂಲಕ ಇಲ್ಲಿನ ಬಡಾವಣೆಯ ಜನತೆಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ.

ಶಿವಮೊಗ್ಗ ರಸ್ತೆಯ ಸೇತುವೆಯ ಮೇಲೆ ಹಾದು ಹೋಗಿರುವ ಪೈಪ್ ಡ್ಯಾಮೇಜ್ ಆಗಿದ್ದು, ಇದೇ ರಸ್ತೆಯಲ್ಲಿ ಸಂಚಾರ ಮಾಡುವ ನಗರಸಭೆ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳ ಗಮನಕ್ಕೆ ಬಂದಿದ್ದರೂದುರಸ್ತಿಪಡಿಸಲುಮುಂದಾಗದೇ ಇರುವುದರಿಂದ ಬೆಳಗ್ಗೆಯಿಂದ ಸಂಜೆಯವರೆಗೆ ಹರಿಯುವ ನೀರು ಚರಂಡಿ ಪಾಲಾಗುತ್ತಿದೆ. ರಸ್ತೆಯಲ್ಲಿ ಹರಿಯುವುದರಿಂದ ಸಾರ್ವಜನಿಕರು ಈ ನೀರಿನ ಮೇಲೆ ಓಡಾಡುವಂತಾಗಿದೆ.


॥ಶ್ರೀ ಮರುಳಸಿದ್ದೇಶ್ವರ ಪ್ರಸನ್ನ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥, ಕುರ್ಕಿ ಗ್ರಾಮದ ವಾಸಿ
ಕರಿಬಸಪ್ಪ ಕೆ.ಆರ್. ರವಿಕುಮಾರ್ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 13.07.2021ನೇ ಮಂಗಳವಾರ ಬೆಳಿಗ್ಗೆ 11.15ಕ್ಕೆ ನಮ್ಮ ದೊಡ್ಡಪ್ಪನವರಾದ
ಶ್ರೀ ಕೆ.ಜಿ. ವಿರುಪಾಕ್ಷಪ್ಪನವರು
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ' ಯನ್ನು
ದಿ. : 21.07.2021ನೇ ಬುಧವಾರ ಬೆಳಿಗ್ಗೆ 11.00 ಘಂಟೆಗೆ ಕುರ್ಕಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀ ಕೆ.ಆರ್. ರವಿಕುಮಾರ್ ಮತ್ತು ಶ್ರೀ ಕೆ.ಆರ್. ದಯಾನಂದಪ್ಪ
ಕರಿಬಸಪ್ಪ ವಂಶಸ್ಥರು, ಕುರ್ಕಿ ಹಾಗೂ ಬಂಧು-ಮಿತ್ರರು. ಮೊ.:98447 12580
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**15ನೇ ವರ್ಷದ ಪುಣ್ಯಸ್ಮರಣೆ**



ದಿ॥ ಅಂಗಡಿ ಮುರಿಗೆಪ್ಪ
ನಿಧನ : 21.07.2006
*ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದವು.*
*ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,*
ಪತ್ನಿ : ಅಂಗಡಿ ನೀಲಮ್ಮ, ಪುತ್ರ : ಅಂಗಡಿ ಮಂಜುನಾಥ
ಸುಜನ, ಆದರ್ಶ, ಐಶ್ವರ್ಯ


**ಗೌಡ್ರು ಮಲ್ಲಮ್ಮ ನಿಧನ**



ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಶಿವಪುರ ಗ್ರಾಮದ ವಾಸಿ ದಿ. ಗೌಡ್ರು ಬಸವರಾಜಪ್ಪ ಇವರ ಧರ್ಮಪತ್ನಿ ಶ್ರೀಮತಿ ಗೌಡ್ರು ಮಲ್ಲಮ್ಮ (70) ಅವರು ದಿನಾಂಕ 20.07.2021ರ ಮಂಗಳವಾರ ಸಂಜೆ 7 ಗಂಟೆಗೆ ನಿಧನರಾಗಿದ್ದಾರೆ. ನಾಲ್ವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.07.2021 ರಂದು ಬುಧವಾರ ಬೆಳಗ್ಗೆ 11.30 ಗಂಟೆಗೆ ಶಿವಪುರ ಗ್ರಾಮದಲ್ಲಿ ನೆರವೇರಲಿದೆ.

# ಅಭಾವ ಸೃಷ್ಟಿಯಾಗದಂತೆ ಸೂಚನೆ

(1ನೇ ಪುಟದಿಂದ) ಅಧಿಕಾರಿಗಳು ಮಾರಾಟ ಮಳಿಗೆಗಳ ತಪಾಸಣೆ ನಡೆಸಿದರು.

ತಪಾಸಣಾ ತಂಡದಲ್ಲಿ ಕೃಷಿ ಅಧಿಕಾರಿಗಳಾದ ಜೆ. ಗಿರೀಶ್, ಕೃಷಿ ಅಧಿಕಾರಿ ಎಸ್. ಜೀವಿತ, ಕೃಷಿ ಅಧಿಕಾರಿ ಎಂ.ಎ. ಹರ್ಷ, ಎ.ಡಿ. ಕೃಷ್ಣಪ್ಪ, ರವಿಂದ್ರನಾಥ್ ಮತ್ತು ಸಹಾಯಕ ಕೃಷಿ ಅಧಿಕಾರಿ ಹೆಚ್.ಡಿ. ಹನುಮಂತಪ್ಪ ಕಾರ್ಯನಿರ್ವಹಿಸಿದರು ಎಂದು ಅವರು ತಿಳಿಸಿದ್ದಾರೆ.

ರಸಗೊಬ್ಬರ ಮಾರಾಟಗಾರರಿಗೆ ರಸಗೊಬ್ಬರ ನಿಯಂತ್ರಣ ಆದೇಶ 1985 ಉಲ್ಲಂಘನೆ ಮಾಡಿದ್ದಲ್ಲಿ ಪರವಾನಿಗೆ ರದ್ದು ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿ ರುತ್ತದೆ.

ಪರಿಶೀಲನೆ ಸಮಯದಲ್ಲಿ ಭೌತಿಕವಾಗಿ ಹಾಗೂ ಪಿಓಎಸ್ ಮಿಷನ್‌ನಲ್ಲಿ ಗೊಬ್ಬರವನ್ನು ಪರಿಶೀಲಿಸಲಾಗಿರುತ್ತದೆ.

ಮಾರಾಟಗಾರರು ಯೂರಿಯಾ ರಸಗೊಬ್ಬರ ಕೃತಕ ಅಭಾವ ಸೃಷ್ಟಿ ಮಾಡಬಾರದು, ನಿಗದಿತ ದರಕ್ಕೆ ರಸಗೊಬ್ಬರ ಮಾರಾಟ ಮಾಡಬೇಕು, ಆಧಾರ್ ಕಾರ್ಡ್ ಮೂಲಕ ಮಾರಾಟ ಮಾಡಬೇಕು ಹಾಗೂ ರಸಗೊಬ್ಬರ ದರಪಟ್ಟಿಯನ್ನು ಕಡ್ಡಾಯವಾಗಿ ಪ್ರಕಟಿಸಬೇಕು ಎಂಬ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಜಗಳೂರು ಪ.ಪಂ.ಗೆ ಲೋಕಾನಾಯ್ಕ್ ಮುಖ್ಯಾಧಿಕಾರಿ



ಜಗಳೂರು, ಜು.20- ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿಯಾಗಿ ಲೋಕಾನಾಯ್ಕ್ ಅಧಿಕಾರ ವಹಿಸಿಕೊಂಡರು. ಹಿಂದಿನ ಮುಖ್ಯಾಧಿಕಾರಿ ರಾಜು ಬಣಕಾರ್ ಅವರ ವರ್ಗಾವಣೆಯಿಂದ ಈ ಸ್ಥಾನ ತೆರವಾಗಿತ್ತು.

# ಬಿಎಸ್‌ವೈ ಮುಂದುವರಿಕೆಗೆ ಯತ್ನ

(1ನೇ ಪುಟದಿಂದ) ನೀಡುತ್ತಿದ್ದಾರೆ, ಅವರ ಬದಲಾವಣೆ ಮಾಡುವುದು ಸರಿಯಲ್ಲ, ಹಾಗೊಂದು ವೇಳೆ ಬದಲಾವಣೆ ಮಾಡಿದ್ದೇ ಆದರೆ, ಇಡೀ ಸಮಾಜವನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪ್ರತೀ ಚುನಾವಣೆಯೂ ಅವರ ಮುಂದಾಳತ್ವದಲ್ಲೇ ನಡೆಯುತ್ತಿವೆ, ಪಕ್ಷಕ್ಕೆ ಅಪಾರವಾಗಿ ಶ್ರಮಿಸಿದ್ದಾರೆ, ರಾಜ್ಯಕ್ಕೆ ತಮ್ಮದೇ ಆದ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅಂಥ ಮೇಧಾವಿ-ಮುತ್ಸದ್ಧಿಯನ್ನು ನಿರ್ಲಕ್ಷಿಸುವುದರಿಂದ ಮುಂದೆ ಭಾರೀ ನಷ್ಟವನ್ನು ಪಕ್ಷ ಅನುಭವಿಸಬಾಕಾಗುತ್ತದೆ ಎಂಬ ಭಾವನೆ ದಟ್ಟವಾಗಿದೆ, ಆದ ಕಾರಣ ಅವರನ್ನು ಗೌರವದಿಂದ ನೋಡಿಕೊಳ್ಳುವುದು ಸೂಕ್ತ ಎಂದು ಹಲವು ಮಠಾಧೀಶರು ಹೇಳಿದ್ದಾರೆ.

ಇಷ್ಟೇ ಅಲ್ಲ, ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಮಠಾಧೀಶರುಗಳು ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

ಇದರ ನಡುವೆ ಅವರ ಸಂಪುಟದ ಕೆಲವು ಸಹೋದ್ಯೋಗಿಗಳು ಹಾಗೂ ಶಾಸಕರು ತಮ್ಮ ನಾಯಕನನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಭೇಟಿಯ ನಂತರ ಬಿಜೆಪಿಯ ಯಾವುದೇ ನಾಯಕರು ಪಕ್ಷದ ವಿರುದ್ಧ ಮಾತನಾಡುವಂತಹ ಧೈರ್ಯ ತೋರಲಿಲ್ಲ, ಎಲ್ಲರೂ ತೇಲಿಸಿ ಮಾತನಾಡಿ, ಮುಂದೆ ನಡೆದರು.

ಈ ಹಿಂದೆ ಇದೇ ನಾಯಕರುಗಳು ಯಡಿಯೂರಪ್ಪ ಅವರ ಪರ ಏರುಧ್ವನಿಯಲ್ಲಿ ಮಾತನಾಡಿದ್ದನ್ನು ಕಳೆದ ತಿಂಗಳಷ್ಟೇ ಕಾಣಬಹುದು.

ಈ ಎಲ್ಲಾ ಬೆಳವಣಿಗೆ ಬಗ್ಗೆ ಯಡಿಯೂರಪ್ಪ ಅವರಿಂದ ಮಾತ್ರ ಯಾವುದೇ ಪ್ರತಿಕ್ರಿಯೆ ಬರುತ್ತಿಲ್ಲ. ಎಂದಿನಂತೆ ಸೌಮ್ಯವಾಗಿ ಮೌನವಾಗಿದ್ದಾರೆ, ಆದರೆ, ತಮ್ಮ ತಂದೆಯ ಅಧಿಕಾರ ಉಳಿಸಲು ಪುತ್ರ ವಿಜಯೇಂದ್ರ ತೆರೆಮರೆಯಲ್ಲಿ ರಾಜಕೀಯ ಕಸರತ್ತು ಆರಂಭಿಸಿದ್ದಾರೆ.

ಪಕ್ಷದ ಉನ್ನತ ಮೂಲಗಳ ಪ್ರಕಾರ, ಈ ತಿಂಗಳ 26ರ ಸಂಜೆ 6 ಗಂಟೆಯೊಳಗೆ ಮುಖ್ಯಮಂತ್ರಿ ಸ್ಥಾನಕ್ಕೆ ಯಡಿಯೂರಪ್ಪ ರಾಜೀನಾಮೆ ನೀಡಲೇಬೇಕು ಎಂದು ಪಕ್ಷದ ವರಿಷ್ಠ ನಾಯಕರು ಠರಾವು ಹೊರಡಿಸಿದ್ದಾರೆ.

## ಬಿಎಸ್‌ವೈ ಹಿಂದೆ ಸರಿದರೆ ಬಿಜೆಪಿಗೆ ತೊಂದರೆ

(1ನೇ ಪುಟದಿಂದ) ಪೀಠ ಸೇರಿದಂತೆ ಪಂಚ ಪೀಠಗಳೂ ಹಾಗೂ ಎಲ್ಲ ಪೀಠಗಳು ಬಹುತೇಕ ಅವರ ಪರವಾಗಿ ನಿಲ್ಲುತ್ತವೆ ಎಂದು ತಿಳಿಸಿದ್ದಾರೆ.


ಯಡಿಯೂರಪ್ಪ ಪ್ರಶ್ನಾತೀತ ನಾಯಕ ಎಂದು ಎಲ್ಲಾ ಸಮುದಾಯದ ಜನರು ಬೆಂಬಲಿಸಿದ್ದಾರೆ. ಅವರು ಮುಖ್ಯಮಂತ್ರಿಯಾದ ನಂತರ ನಡೆದ ಬಹುತೇಕ ಎಲ್ಲ ಚುನಾವಣೆಗಳಲ್ಲಿ ರಾಜ್ಯದ ಜನತೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಅವರು ಮುಂದುವರೆಯುವುದರಿಂದ ಪಕ್ಷಕ್ಕೆ ಹಾಗೂ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಎಂದು ಶ್ರೀಗಳು ಹೇಳಿದರು.

ಇಡೀ ವೀರಶೈವ ಮಹಾಸಭೆ ಹಾಗೂ ಅದರ ಅಧ್ಯಕ್ಷರಾಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಯಡಿಯೂರಪ್ಪಗೆ ಬೆಂಬಲ ಸೂಚಿಸಿದ್ದಾರೆ. ಕೇಂದ್ರ ಸರ್ಕಾರ ಅಥವಾ ಬಿಜೆಪಿ ಹೈಕಮಾಂಡ್ ಯಡಿಯೂರಪ್ಪನವರನ್ನು ಚೆನ್ನಾಗಿ ನಡೆಸಿಕೊಳ್ಳಬೇಕು. ಅವರಿಗೆ ಅಗೌರವವಾಗುವಂತೆ ನಡೆದುಕೊಳ್ಳಬಾರದು ಎಂದವರು ಹೇಳಿದ್ದಾರೆ.

ಶ್ರೀಶೈಲ ಪೀಠ ಸ್ಪಷ್ಟವಾಗಿ ಯಡಿಯೂರಪ್ಪ ಅವರ ಬೆನ್ನಿಗಿದೆ. ಅವರು ಒಂದು ಧರ್ಮ, ಒಂದು ಪೀಠಕ್ಕೆ ಸೀಮಿತ ಅಲ್ಲ. ಎಲ್ಲ ಜನಾಂಗದವರಿಗೆ ನ್ಯಾಯ ಒದಗಿಸುವ ಕೀರ್ತಿ ಅವರಿಗೆ ಸಲ್ಲಬೇಕು. ಅವರಿಗೇನಾದರೂ ಆದರೆ ಎಲ್ಲ ಜನಾಂಗದವರು ಅವರ ಪರವಾಗಿ ನಿಲ್ಲುವ ಸಾಧ್ಯತೆ ಇದೆ ಎಂದು ಶ್ರೀಗಳು ತಿಳಿಸಿದ್ದಾರೆ.

ಮುಂದಿನ ಏನೇನು ಬೆಳವಣಿಗೆಗಳು ಆಗುತ್ತಿವೆ ಎಂಬುದನ್ನು ನಾವು ಗಮನಿಸುತ್ತಿದ್ದೇವೆ. ಸಮಾನ ಪೀಠಾಚಾರ್ಯರ ಜೊತೆ ನಾವು ಮಾತುಕತೆ ನಡೆಸುತ್ತೇವೆ. ಅನೇಕ ಮಠಾಧೀಶರ ಜೊತೆ ಚರ್ಚೆ ಮಾಡುತ್ತೇವೆ ಎಂದ ಶ್ರೀಗಳು, ಒಂದು ವೇಳೆ ಯಡಿಯೂರಪ್ಪ ಹಿಂದೆ ಸರಿಯುವಂತೆ ಮಾಡಿದರೆ, ಪಕ್ಷಕ್ಕೆ ತೊಂದರೆಯಾಗುವ ಎಲ್ಲ ಸಾಧ್ಯತೆಗಳಿವೆ ಎಂದು ಅಭಿಪ್ರಾಯ ಪಟ್ಟರು.

# ಗ್ರಾಸಿಂನಿಂದ ಸ್ಪಿರುಲಿನಾ ಚಿಕ್ಕಿ : ಅಪೌಷ್ಠಿಕ ಮಕ್ಕಳಿಗೆ ನೆರವು



ದಾವಣಗೆರೆ, ಜು.20 - ಅಲೆಗಳು ಎಷ್ಟೇ ಬಂದರೂ ಎದುರಿಸಲು ಜಿಲ್ಲಾಡಳಿತ ಸದಾ ಸಿದ್ದವಾಗಿರುತ್ತದೆ. ಆದರೆ, ಅಲೆ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ನಾಗರಿಕರ ಮೇಲಿರುತ್ತದೆ. ಕೊರೊನಾ ಮ್ಯುಟೆಂಟ್ ವೈರಸ್ ಬರುತ್ತಿರುವುದರಿಂದ ಮಕ್ಕಳ ಮೇಲೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನಿನ್ನೆ ಏರ್ಪಡಿಸಿದ್ದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಕುಮಾರಪಟ್ಟಣಂನ ಗ್ರಾಸಿಂ ಇಂಡಸ್ಟ್ರೀಸ್ ಇವರಿಂದ ಉಚಿತವಾಗಿ ಜಿಲ್ಲೆಯ ತೀವ್ರ ಅಪೌಷ್ಠಿಕ ಹಾಗೂ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ಸ್ಪಿರುಲಿನಾ ಚಿಕ್ಕಿ ಮತ್ತು ಸ್ಪಿರುಲಿನಾ ಗ್ರಾನ್ಯುಯಲ್ಸ್ ಸ್ವೀಕರಿಸಿ ಅವರು ಮಾತನಾಡಿದರು.

ಈಗಾಗಲೇ ಸರ್ವೇ ಮಾಡಿ 9 ಸಾವಿರ ಅಪೌಷ್ಠಿಕ ಮಕ್ಕಳನ್ನು ಗುರುತಿಸಿ ಜಿಲ್ಲಾಡಳಿತ ಅವರನ್ನು ದತ್ತು ಪಡೆದು 2 ತಿಂಗಳ ಅವಧಿಯಲ್ಲಿ ಗುಣ ಮಾಡುವಂತಹ ಜವಾಬ್ದಾರಿ ವಹಿಸಿಕೊಂಡಿದೆ. ಮೊದಲನೇ ಅಲೆಯಲ್ಲಿ ಚಿಕ್ಕಿ ಮತ್ತು ಗ್ರಾನ್ಯುಯಲ್ಸ್ ತರಿಸಿ ಕೊರೊನಾ ಸೋಂಕಿತರಿಗೆ ಕೊಡಲಾಗುತ್ತಿತ್ತು. ಅವರು ಬೇಗ ಗುಣಮುಖರಾಗಿರುವುದನ್ನು ಕಂಡಿದ್ದು, ಈ ಹಿನ್ನೆಲೆಯಲ್ಲಿ ಅಪೌಷ್ಠಿಕ ಮಕ್ಕಳಿಗೆ ಇದನ್ನು ಕೊಡುವುದರಿಂದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಬಹುದು ಎಂದು ಅಭಿಪ್ರಾಯಪಟ್ಟರು.


ಜಿ.ಪಂ. ಸಿಇಒ ವಿಜಯ ಮಹಾಂತೇಶ ದಾನಮ್ಮನವರ್ ಮಾತನಾಡಿ, ತೀವ್ರ ಅಪೌಷ್ಠಿಕ ಮತ್ತು ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ಮೂರನೇ ಅಲೆಯಲ್ಲಿ ಕೊರೊನಾ ಬರುವ ಸಾಧ್ಯತೆ ಇರುತ್ತದೆ ಎಂದು ಪರಿಣಿತರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಅಪೌಷ್ಠಿಕತೆ ಬಗ್ಗೆ ತಿಳುವಳಿಕೆ ನೀಡುವುದು ಹಾಗೂ ತಾಯಂದಿರು ವ್ಯಾಕ್ಸಿನ್ ಹಾಕಿಸಿಕೊಳ್ಳುವಂತೆ ಕರೆ ನೀಡಿದರು.

ಸಿಂಡಿಕೇಟ್ ಘಟಕದ ಆಯೋಜಕರಾದ ಮಹೇಶ್ ಮಾತನಾಡಿ, ಸ್ಪಿರುಲಿನಾ ಚಿಕ್ಕಿ ಮತ್ತು ಸ್ಪಿರುಲಿನಾ ಗ್ರಾನುಯಲ್ಸನ್ನು ಅಪೌಷ್ಟಿಕತೆಯಿಂದ ಬಳಲುತ್ತಿರುವ 5 ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ಮಕ್ಕಳು ಈ ಚಿಕ್ಕಿಯನ್ನು ಸೇವಿಸಬಹುದು ಎಂದರು.

ಹಿರಿಯ ನಿವೃತ್ತ ಐಎಎಸ್ ಅಧಿಕಾರಿಗಳಾದ ಕೇದಾರನಾಥ್ ಮಾತನಾಡಿ, ಮಕ್ಕಳಲ್ಲಿ ರೋಗ ನಿರೊಧಕ ಶಕ್ತಿ ಹೆಚ್ಚಿನ ಪ್ರಮಾಣದಲ್ಲಿ ಇದ್ದಾಗ ಮಾತ್ರ ಯಾವುದೇ ಕಾಯಿಲೆಗಳನ್ನು ಎದುರಿಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಸಿಂ ಇಂಡಸ್ಟ್ರಿಸ್ ಸಂಸ್ಥಾಪಕ ಅಜಯ್ ಗುಪ್ತಾ, ಸಂದೀಪ್ ಭಟ್, ಶ್ರೀನಿವಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯ್ ಕುಮಾರ್ ಉಪಸ್ಥಿತರಿದ್ದರು.

# ದ್ವಿತೀಯ ಪಿಯು ಫಲಿತಾಂಶ : ಸಿದ್ಧಗಂಗಾ ಶಾಲೆ ವಿದ್ಯಾರ್ಥಿಗಳ ಸಾಧನೆ



## 13 ವಿದ್ಯಾರ್ಥಿಗಳಿಗೆ 600ಕ್ಕೆ 600 ಅಂಕಗಳು

ದಾವಣಗೆರೆ, ಜು.21- 2020-21 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಇಂದು ಪ್ರಕಟವಾಗಿದ್ದು, ನಗರದ ಶ್ರೀ ಸಿದ್ದಗಂಗಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮೆರೆದಿದ್ದಾರೆ.

ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಹಾಗೂ ಪ್ರಥಮ ಪಿಯುಸಿ ಅಂಕಗಳ ಆಧಾರದ ಮೇಲೆ ನಿರ್ಧರಿಸಲ್ಪಟ್ಟ ಫಲಿತಾಂಶದಲ್ಲಿ ಸಿದ್ದಗಂಗಾ ಪಿಯು ಕಾಲೇಜಿನ ಭೂಮಿಕಾ ಎಂ, ಚಂದನ್ ಬಿ.ಪಿ, ಚೇತನ್ ಹೆಚ್.ವಿ, ದಿವ್ಯಶ್ರೀ ಟಿ.ಕೆ, ಗೌರಿ ಜಯಣ್ಣ ಇಟಗಿ, ಅಭಿಲಾಷ್ ಕೆ.ಎಸ್, ಪ್ರೀತಿ ಎನ್.ಎಂ, ರಾಜೇಶ್ವರಿ ಜಿ, ಸಂಜನಾ ಎಂ.ಜಿ, ಪಿ. ವೆಂಕಟದುರ್ಗಪ್ರಸಾದ್, ತನಿಷ ತಾನಾಜಿ ಶಿಂಧೆ ಟಿ, ತೇಜಸ್ವಿನಿ ಜಿ.ಕೆ, ವರುಣ್ ಕುಮಾರ್ ಎ. 600ಕ್ಕೆ 600 ಅಂಕಗಳನ್ನು ಪಡೆದಿದ್ದಾರೆ.

ಕಾಲೇಜಿನಿಂದ ಒಟ್ಟು 544 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯೊಂದಿಗೂ 342 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಎಲ್ಲಾ ವಿದ್ಯಾರ್ಥಿ ಹಾಗೂ ಸಿಬ್ಬಂದಿಯನ್ನು ಕಾಲೇಜಿನ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜ, ಪ್ರಾಚಾರ್ಯ ಡಿ.ಸಿ. ನಿರಂಜನ್, ಕಾಲೇಜಿನ ನಿರ್ದೇಶಕ ಡಾ. ಜಯಂತ್, ಕಾರ್ಯದರ್ಶಿ, ಡಿ.ಎಸ್. ಹೇಮಂತ್, ಅಧ್ಯಕ್ಷ ಡಿ.ಎಸ್. ಪ್ರಶಾಂತ್ ಅವರು ಅಭಿನಂದಿಸಿದ್ದಾರೆ.

# ವ್ಯವಹಾರದಲ್ಲಿ ಕಾಂಗ್ರೆಸ್ ಹಸ್ತಕ್ಷೇಪ

(1ನೇ ಪುಟದಿಂದ) ಮಾಡಿದೆ. ಕಾಂಗ್ರೆಸ್‌ನಲ್ಲಿರುವ ಮೀರ್‌ಸಾಧಿಕ್‌ನಂತಹ ನಾಯಕರೊಬ್ಬರು ಇದರ ಹಿಂದೆ ಇದ್ದು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೊರಟಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ವೀರಶೈವ - ಲಿಂಗಾಯತ ಪ್ರತ್ಯೇಕ ಧರ್ಮ ಸ್ಥಾಪನೆಗೆ ಮುಂದಾಗಿದ್ದರು. ಇದಕ್ಕೆ ಹಾಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದ್ದಲ್ಲದೆ, ಧರ್ಮವನ್ನು ವಿಭಜನೆ ಮಾಡಲು ಹೊರಟಿದ್ದೇ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣ ಎಂದು ಅಭಿಪ್ರಾಯಪಟ್ಟಿದ್ದರು.

ಆದರೆ, ಧರ್ಮ ವಿಭಜಕರನ್ನು ಸಮರ್ಥಿಸಿಕೊಳ್ಳುವ ಮೂಲಕ ಜಾತಿ ವಿಭಜಕ ಮೀರ್‌ಸಾಧಿಕ್‌ನಿಗೆ ತಾವು ತಕ್ಕ ಶಿಷ್ಯ ಎಂದು ನಿರೂಪಿಸಿಕೊಂಡಿದ್ದಾರೆ ಎಂದು ಪರೋಕ್ಷವಾಗಿ ಎಂ.ಬಿ.ಪಾಟೀಲ್ ಅವರನ್ನು ಬಿಜೆಪಿ ಟೀಕಿಸಿದೆ.

ಆತ್ಮಸಾಕ್ಷಿಯಾಗಿ ಯಡಿಯೂರಪ್ಪ ಅವರಿಗೆ ಬೆಂಬಲ ನೀಡಿದ್ದೇನೆ ಎನ್ನುತ್ತಾರೆ, ಆತ್ಮಸಾಕ್ಷಿ...!? ಹಾಗೆಂದರೇನು ಪಾಟೀಲರೇ? ನೀವು ಸಚಿವರಾಗಿದ್ದಾಗ ಬಿಜೆಪಿಯ ಅತ್ಯುನ್ನತ ನಾಯಕ ಯಡಿಯೂರಪ್ಪ ಅವರಿಗೆ ಬಳಸಿದ ಪದಗಳನ್ನು ಒಮ್ಮೆ ನೆನಪಿಸಿಕೊಳ್ಳಿ ಎಂದು ಕುಟುಕಿದೆ.

# 25ಕ್ಕೆ ನಗರದಲ್ಲಿ ಕೆ-ಸೆಟ್ ಪರೀಕ್ಷೆ

ದಾವಣಗೆರೆ, ಜು. 20 - ಇದೇ ದಿನಾಂಕ 25ರ ಭಾನುವಾರದಂದು ನಗರದ 9 ಉಪಕೇಂದ್ರಗಳಲ್ಲಿ ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ-ಸೆಟ್ ನಡೆಯಲಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕೆ-ಸೆಟ್ ನೋಡಲ್ ಅಧಿಕಾರಿ ಪ್ರೊ. ಜೆ.ಕೆ. ರಾಜು ತಿಳಿಸಿದ್ದಾರೆ.

ವಿದ್ಯಾರ್ಥಿಗಳು kset.uni-mysore.ac.in ವೆಬ್ ತಾಣದಲ್ಲಿ ಪರೀಕ್ಷಾ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಭಾವಚಿತ್ರವಿರುವ ಮೂಲ ಗುರುತಿನ ಚೀಟಿಯನ್ನು ಪರೀಕ್ಷಾ ಕೇಂದ್ರಕ್ಕೆ ತರಬೇಕು ಎಂದವರು ಹೇಳಿದ್ದಾರೆ. ನಗರದ ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ಬಿ.ಐ.ಇ.ಟಿ., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎ.ಆರ್.ಜಿ. ಕಾಲೇಜು, ಎ.ವಿ.ಕೆ. ಕಾಲೇಜು, ಜಿ.ಎಂ.ಐ.ಟಿ., ಜಿ.ಎಂ.ಎಸ್. ಅಕಾಡೆಮಿ ಪ್ರಥಮ ದರ್ಜೆ ಕಾಲೇಜು, ನೂತನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದವರು ಹೇಳಿದ್ದಾರೆ.

# ಬೆಸ ಸೆಮಿಸ್ಟರ್ ಪರೀಕ್ಷೆಗಳ ರದ್ದತಿಗೆ ಆಗ್ರಹ




(1ನೇ ಪುಟದಿಂದ) ಶಿಕ್ಷಣ ತಜ್ಞರ ಅನಿಸಿಕೆಯ ಸಹಿ ಸಂಗ್ರಹ ಅಭಿಯಾನದಲ್ಲಿ ಸುಮಾರು 1 ಲಕ್ಷದ 20 ಸಾವಿರಕ್ಕೂ ಹೆಚ್ಚು ಸಹಿ ಸಂಗ್ರಹವನ್ನೂ ಸಹ ಮನವಿ ಜೊತೆಗೆ ನೀಡಿದರು.

ರಾಜ್ಯದಲ್ಲಿ ಕೊರೊನಾ ಎರಡನೇ ಅಲೆಯ ತೀವ್ರತೆ ಹೆಚ್ಚಾಗಿ ಲಾಕ್ ಡೌನ್ ಆಗಿದ್ದ ಸಮಯದಲ್ಲಿ ಹಿಂದಿನ ಸೆಮಿಸ್ಟರ್ ನ ಪರೀಕ್ಷೆಗಳನ್ನು ನಡೆಸದೆಯೇ ಎಲ್ಲಾ ವಿದ್ಯಾರ್ಥಿಗಳನ್ನು ಮುಂದಿನ ಸೆಮಿಸ್ಟರ್ ಗೆ ಕಳುಹಿಸಲಾಯಿತು. ಕಳೆದ 2 ತಿಂಗಳಿನಿಂದ ಆನ್ ಲೈನ್ ತರಗತಿಗಳು ಸಹ ನಡೆಯುತ್ತಿವೆ. ಈಗ ಹಠಾತ್ತನೆ ಹಿಂದಿನ ಸೆಮಿಸ್ಟರ್‌ನ ಪರೀಕ್ಷೆಯನ್ನು ಜುಲೈ ಕೊನೆಯ ವಾರದಿಂದ ಆಗಸ್ಟ್ ಮೊದಲ ವಾರದಲ್ಲಿ ಮುಗಿಸಿ ನಂತರ ಸೆಪ್ಟಂಬರ್ ಒಳಗೆ ಪ್ರಸ್ತುತ ಸೆಮಿಸ್ಟರ್ ಪರೀಕ್ಷೆಯನ್ನು ಮುಗಿಸಬೇಕೆಂಬ ರಾಜ್ಯ ಸರ್ಕಾರದ ನಿರ್ಧಾರವು ಲಕ್ಷಾಂತರ ವಿದ್ಯಾರ್ಥಿಗಳಿಗೆ ದೊಡ್ಡ ಆಘಾತವಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಒಂದು ತಿಂಗಳಿನಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆ ನಡೆಸುವ ಬಗ್ಗೆ ಎಐಡಿಎಸ್‌ಓ ರಾಜ್ಯ ಸಮಿತಿ ನಡೆಸಿದ ಬೃಹತ್ ಗೂಗಲ್ ಸಮೀಕ್ಷೆಯಲ್ಲಿ ರಾಜ್ಯದ 46 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

41 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್ ನ ಪರೀಕ್ಷೆಗಳನ್ನು ಕೈಬಿಡಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಬೋರ್ಡ್ ಹಾಗೂ ಪಬ್ಲಿಕ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ನಮಗೆ ಪರೀಕ್ಷೆಯನ್ನು ಎದುರಿಸಲು ಭಯವಿಲ್ಲ. ಆದರೆ ಈಗ ಕಳೆದ ಸೆಮಿಸ್ಟರ್ ಪರೀಕ್ಷೆ ನಡೆಸುವುದಾದರೆ ಅದರ ಪಠ್ಯ-ಪ್ರಶ್ನೆ ಪತ್ರಿಕೆ ಸಿದ್ಧತೆ, ಮೌಲ್ಯಮಾಪನ ಈ ಪ್ರಕ್ರಿಯೆಗಳಿಗೆ ಸಾಕಷ್ಟು ಸಮಯ ವ್ಯಯವಾಗುತ್ತದೆ. ಆಗಸ್ಟ್- ಸೆಪ್ಟೆಂಬರ್ ತಿಂಗಳಿನಲ್ಲಿ ಕೋವಿಡ್ ಮೂರನೇ ಅಲೆ ಭೀಕರವಾಗಿ ಬರಲಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಹೀಗಿರುವಾಗ ಒಂದು ತಿಂಗಳಿನಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವುದು ಅವಾಸ್ತವ ಅಷ್ಟೇ ಅಲ್ಲ, ಅದು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ಮೇಲೆ ಅಧಿಕ ದೈಹಿಕ ಹಾಗೂ ಮಾನಸಿಕ ಒತ್ತಡವನ್ನು ಸೃಷ್ಟಿಸುತ್ತದೆ. ಅತಿ ಕಡಿಮೆ ಸಮಯದಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ತಯಾರಿ ನಡೆಸಬೇಕೆಂದರೆ ಇದು ಗುಣಮಟ್ಟದ ಶಿಕ್ಷಣ, ಕಲಿಕೆ, ಜ್ಞಾನಾರ್ಜನೆಗೆ ಮಾರಕವಾಗುತ್ತದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದಿನ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವ ನಿರ್ಧಾರವನ್ನು ಕೈಬಿಡಿ. ಅಂತಿಮ ಸೆಮಿಸ್ಟರ್‌ನ ಪರೀಕ್ಷೆಯನ್ನು ಅಚ್ಚುಕಟ್ಟಾಗಿ ನಡೆಸಬೇಕು, ಶಿಕ್ಷಣ ತಜ್ಞರು, ಉಪನ್ಯಾಸಕರು, ಪೋಷಕರು ಹಾಗೂ ವಿದ್ಯಾರ್ಥಿಗಳೊಡನೆ ಪ್ರಜಾತಾಂತ್ರಿಕ ಚರ್ಚೆಗಳನ್ನು ನಡೆಸಿ ಶೈಕ್ಷಣಿಕ ವೇಳಾಪಟ್ಟಿ, ಪರೀಕ್ಷೆ, ಮೌಲ್ಯಮಾಪನ ಇವುಗಳ ಬಗ್ಗೆ ಒಂದು ವೈಜ್ಞಾನಿಕ - ಪ್ರಜಾತಾಂತ್ರಿಕ ನೀತಿಯನ್ನು ರೂಪಿಸಬೇಕು, ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಲಸಿಕೆ ನೀಡುವ ಮುನ್ನ ಆಫ್ ಲೈನ್ ತರಗತಿಗಳನ್ನು ಪ್ರಾರಂಭಿಸಬೇಡಿ, ಯುಜಿಸಿ ಹಾಗೂ ಸುಪ್ರೀಂಕೋರ್ಟ್ ಮಾರ್ಗಸೂಚಿ ಅನುಸರಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಎಐಡಿಎಸ್ ಓ ಜಿಲ್ಲಾ ಕಾರ್ಯದರ್ಶಿ ಪೂಜಾ, ಕಿರಣ್, ಕಾವ್ಯ, ಸಂಜು, ಪುಷ್ಪ ಸೇರಿದಂತೆ, ಇತರರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿಗಳು ಉತ್ತೀರ್ಣ

(1ನೇ ಪುಟದಿಂದ) ಸಲ್ಲಿಸಲು ಜುಲೈ 30 ಕೊನೆಯ ದಿನವಾಗಿದೆ. ಅವರಿಗೆ ಇದೇ ಆಗಸ್ಟ್ 21 ರಿಂದ ಸೆಪ್ಟೆಂಬರ್ 3ರ ಒಳಗೆ ಪರೀಕ್ಷೆ ನಡೆಸಲಾಗುತ್ತಿದೆ. ಇವರೊಟ್ಟಿಗೆ ಖಾಸಗಿ ಅಭ್ಯರ್ಥಿಗಳಿಗೂ ಪರೀಕ್ಷೆ ನಡೆಯಲಿದೆ.ಪರೀಕ್ಷೆನಂತರಬರುವಫಲಿತಾಂಶವೇ ಅಂತಿಮವಾಗಿರುತ್ತದೆ ಎಂದು ಅವರು ಹೇಳಿದರು.

# 6 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣ

(1ನೇ ಪುಟದಿಂದ) ರಷ್ಟು ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಲಾಗಿದೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 4,50,706 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. 1,47,056 ವಿದ್ಯಾ ರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ 68,729 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ವಿದ್ಯಾರ್ಥಿಗಳಿಗೆ ಎಸ್‌ಎಂಎಸ್ ಮೂಲಕ ಫಲಿತಾಂಶ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ. ಈ ಫಲಿತಾಂಶ ಇಚ್ಛಿಸದ ವಿದ್ಯಾರ್ಥಿಗಳು ಹೊಸದಾಗಿ ಪರೀಕ್ಷೆ ಬರೆಯಲು ಅವಕಾಶವಿದೆ.

ಪರೀಕ್ಷೆ ಬರೆಯ ಬಯಸುವ ವಿದ್ಯಾರ್ಥಿಗಳು ಜುಲೈ 30 ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಈ ವಿದ್ಯಾರ್ಥಿಗಳಿಗೆ ಆಗಸ್ಟ್ 19 ರಿಂದ ಸೆಪ್ಟೆಂಬರ್ 3 ರೊಳಗೆ ಪರೀಕ್ಷೆ ನಡೆಸಲಾಗುವುದು ಎಂದರು.

ಇನ್ನು 1,95,650 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 2,52,056 ವಿದ್ಯಾರ್ಥಿಗಳು ಪ್ರಥಮ ದರ್ಜೆ ಪಡೆದಿದ್ದರೆ 1,47,055 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಪಿಯುಸಿ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಅಗ್ರಸ್ಥಾನ ಪಡೆದಿದೆ. ಜಿಲ್ಲೆಯ 445 ವಿದ್ಯಾರ್ಥಿಗಳು 600ಕ್ಕೆ 600 ಅಂಕಗಳನ್ನು ಪಡೆದಿದ್ದಾರೆ. ಎರಡನೇ ಸ್ಥಾನದಲ್ಲಿ ಬೆಂಗಳೂರು ದಕ್ಷಿಣವಿದ್ದು, ಇಲ್ಲಿ 302 ವಿದ್ಯಾರ್ಥಿಗಳು ಪೂರ್ಣ ಅಂಕಗಳನ್ನು ಪಡೆದಿದ್ದಾರೆ. ಬೆಂಗಳೂರು ಉತ್ತರದ 261 ವಿದ್ಯಾರ್ಥಿಗಳು, ಉಡುಪಿಯ 149 ವಿದ್ಯಾರ್ಥಿಗಳು, ಹಾಸನದ 104 ವಿದ್ಯಾರ್ಥಿಗಳು 600 ಅಂಕಗಳನ್ನು ಪಡೆದಿದ್ದಾರೆ.

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಒಂದು ವರ್ಷದ ಮಗುವನ್ನು ಮನೆಯಲ್ಲಿ ನೋಡಿಕೊಳ್ಳಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ಕೊಡಲಾಗುವುದು.
ಊಟ ಮತ್ತು ವಸತಿ ನೀಡಲಾಗುವುದು.
ಮೊ. : 63627 82630

INDIAN REDCROSS SOCIETY
DR. SHAMANUR SHIVASHANKARAPPA RED CROSS BHAVANA, NO: 302, 'A' BLOCK, DEVARAJ URS LAYOUT, DAVANGERE-577006.
✆ 9448277727, 9448155182, Email: redcrossdvg@gmail.com
REQUIRED
PATHOLOGIST - 1 No. (M.D/ Diploma in Pathology)
BLOOD BANK TECHNICIANS - 3 No's
Eligible candidates with required documents is requested to submitt their resume to the above mentioned address/ email.
General Secretary, IRCS Davangere.

# ಮುಖ್ಯಮಂತ್ರಿ ಬದಲಾಯಿಸಿದರೆ ತೊಂದರೆ ಖಚಿತ



(1ನೇ ಪುಟದಿಂದ) ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಚಿತ್ರದುರ್ಗ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶ್ರೀಗಳು ಮಾತನಾಡಿದರು.

ಯಡಿಯೂರಪ್ಪ ಅವರು ವಯಸ್ಸನ್ನು ಮೀರಿ ಯುವಕರಂತೆ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯವೈಖರಿ ಅದ್ಭುತವಾದದ್ದು. ಅವರ ರಾಜಕೀಯ ಅನುಭವ ಅಮೋಘವಾದುದು. ಪಕ್ಷದೊಳಗೆ ತೊಂದರೆಯಾಗಬಾರದು. ಅವರು ಶಕ್ತಿ ತೋರಿಸಬಲ್ಲರು. ಅಂತಹ ಮುತ್ಸದ್ಧಿ. ಅವರೊಬ್ಬ ಮಾಸ್ ಲೀಡರ್. ಎಲ್ಲ ಧರ್ಮ, ಸಮುದಾಯದವರನ್ನು ಪ್ರೀತಿಯಿಂದ ನೋಡಿದ್ದಾರೆ. ಅದಕ್ಕೆ ಪತ್ರಿಕಾಗೋಷ್ಠಿಯಲ್ಲಿರುವ ಸ್ವಾಮೀಜಿಗಳೇ ಸಾಕ್ಷಿ. ಯಾವುದೇ ಸಂದರ್ಭದಲ್ಲಿ ಅವರ ಗೌರವ ಘನತೆಗೆ ಧಕ್ಕೆ ಬರುವಂತೆ ಮಾಡಬಾರದು. ನಿರಾತಂಕ ವಾತಾವರಣ ಸೃಷ್ಟಿಸಬೇಕು. ಅವರನ್ನು ಮುಖ್ಯಮಂತ್ರಿಗಳಾಗಿ ಮುಂದುವರೆಸಬೇಕು. ಇದು ಎಲ್ಲ ಪಕ್ಷದವರು ಸಹ ಅವರನ್ನು ಮುಂದುವರೆಸಬೇಕೆಂದು ಹೇಳಿದ್ದಾರೆ.

ಆದರೆ ರಾಜ್ಯ ರಾಜಕಾರಣದಲ್ಲಿ ಒಂದಷ್ಟು ವ್ಯತ್ಯಾಸಗಳು ಏರಿಳಿತಗಳು ಆಗುತ್ತಿವೆ. ಅದು ಎಲ್ಲರಲ್ಲೂ ಗಾಬರಿ ಮತ್ತು ಆತಂಕ ಸೃಷ್ಟಿಸಿದೆ. ನಿರಾತಂಕ, ಆತಂಕರಹಿತವಾದ ಆಡಳಿತ ನೀಡಬೇಕಾಗುತ್ತದೆ. ಆಂತರಿಕ ಬೇಗುದಿ ಇರಬಾರದು. ಒಂದು ಹಂತದಲ್ಲಿ ಆಂತರಿಕ ಕಚ್ಚಾಟ ಇರಬಾರದು. ಯಡಿಯೂರಪ್ಪ ನಾಡು ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ಧಿಯಾಗಿದ್ದಾರೆ. ಏಕವ್ಯಕ್ತಿ ಹೋರಾಟ ಆರಂಭಿಸಿ, ಸರ್ಕಾರ ರಚಿಸುವಷ್ಟರ ಮಟ್ಟಿಗೆ ಶಕ್ತಿಯನ್ನು ಪಡೆದುಕೊಂಡಿದ್ದಾರೆ. 4 ಬಾರಿ ಮುಖ್ಯಮಂತ್ರಿಯಾಗಿ ಕೊರೊನಾ ಸಂದರ್ಭದಲ್ಲಿ ಗಂಭೀರ ಪರಿಸ್ಥಿತಿಯನ್ನು ಚಾಕಚಕ್ಯತೆಯಿಂದ, ವ್ಯತ್ಯಾಸ ಬರದಂತೆ ಮಾನವೀಯತೆಯಿಂದ ಅದನ್ನು ನಿಭಾಯಿಸಿದ್ದಾರೆ. ಕೇಂದ್ರ ಸರ್ಕಾರವು ಸಹ ಮುಖ್ಯಮಂತ್ರಿಗಳ ಕಾರ್ಯವೈಖರಿಯನ್ನು ಶ್ಲಾಘಿಸಿದೆ. ಎಲ್ಲಿಯೂ ವಿಚಲಿತರಾಗದೆ ಮುಂಜಾಗ್ರತೆ ವಹಿಸಿ ಕೊರೊನಾವನ್ನು ನಿಯಂತ್ರಿಸಿದ್ದಾರೆ. ಈ ಸಂದರ್ಭದಲ್ಲಿ ನಾಯಕತ್ವದ ಬದಲಾವಣೆ ವಿಚಾರವು ರಾಜ್ಯದ ಜನರಲ್ಲಿ ಆತಂಕ ಸೃಷ್ಟಿಸಿದೆ. ಮುಖ್ಯಮಂತ್ರಿಗಳು ಬದಲಾದರೆ ನಾಡಿನ ಸಮಸ್ತ ಮಠಾಧೀಶರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೋ ನೋಡೋಣ ಎಂದರು.

ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಶ್ರೀಗಳು ಮಾತ ನಾಡಿ, ಯಡಿಯೂರಪ್ಪ ಅವರು ಅಧಿಕಾರಕ್ಕೆ ಬಂದ ನಂತರ ಎಲ್ಲ ಶೋಷಿತ ಸಮುದಾಯದ ಮಠಗಳನ್ನು ಮೇಲೆತ್ತಿದರು. ಅಧಿಕಾರ ವಹಿಸಿಕೊಂಡ ನಂತರ ಅವರಿಗೆ ಅನೇಕ ಸಮಸ್ಯೆಗಳು ಸುತ್ತಿಕೊಳ್ಳುತ್ತಿವೆ. ಅತಿವೃಷ್ಟಿ, ಅನಾವೃಷ್ಟಿ, ಕೊರೊನಾ ಎಲ್ಲವೂ ಬಂದರೂ ಅವೆಲ್ಲವನ್ನು ಧೈರ್ಯವಾಗಿ ಎದುರಿಸಿದ್ದಾರೆ. ಈ ಅವಧಿಯನ್ನು ಸಂಪೂರ್ಣವಾಗಿ ಮುಗಿಸಲು ಅವಕಾಶ ಮಾಡಿಕೊಡಬೇಕು. ಅದನ್ನವರು ಯಶಸ್ವಿಯಾಗಿ ಪೂರೈಸುತ್ತಾರೆ. ಪಕ್ಷದ ಆಂತರಿಕ ಬೇಗುದಿ ಹೊರಬರದಂತೆ ನೋಡಿಕೊಳ್ಳಬೇಕು. ಅವರಿಗೆ ಏನಾದರೂ ತೊಂದರೆ ಆದರೆ ಅದು ಪಕ್ಷಕ್ಕೆ ಆಗುವ ತೊಂದರೆಯಾಗಲಿದೆ ಎಂದರು.

ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ ಮಾತನಾಡಿ, ಎಲ್ಲ ಸಮುದಾಯದವರಿಗೆ ಮಠ ಕಟ್ಟಿಕೊಟ್ಟವರು ಮುರುಘಾ ಶರಣರು. ಆದರೆ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದವರು ಯಡಿಯೂರಪ್ಪನವರು. ಕರ್ನಾಟಕ ದಲ್ಲಿ ಬಿಜೆಪಿ ಬಂದಿದ್ದರೆ ಅದು ಯಡಿಯೂರಪ್ಪನವರ ಶ್ರಮ ಎಂದರು.

ಭೋವಿ ಗುರುಪೀಠದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿ, ಯಡಿಯೂರಪ್ಪನವರು ಬರೀ ಲಿಂಗಾಯತ ಸಮುದಾಯದ ನಾಯಕರಲ್ಲ. ಅವರು ಸರ್ವ ಸಮುದಾಯಗಳ ನಾಯಕರು. ಅವರ ಭರವಸೆಗಳು ಸಂಪೂರ್ಣವಾಗಿ ಈಡೇರಿವೆ ಎಂದು ಹೇಳಿದರು.

ಇಳಕಲ್‌ನ ಗುರುಮಹಾಂತೇಶ್ವರ ಮಠದ ಶ್ರೀ ಗುರುಮಹಾಂತ ಸ್ವಾಮೀಜಿ ಮಾತನಾಡಿ, ಯಾವುದೇ ಜಾತಿ, ಧರ್ಮವನ್ನು ನೋಡದೆ ಎಲ್ಲರನ್ನೂ ಸಮಾನವಾಗಿ ಯಡಿಯೂರಪ್ಪನವರು ಕಂಡಿದ್ದಾರೆ. ಅವರನ್ನು ಅವಧಿ ಪೂರ್ಣಗೊಳಿಸಲು ಬಿಡಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮೀಜಿ, ಶಿರಸಿ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಸತ್ತಿಮಠದ ಸ್ವಾಮೀಜಿ, ಚಳ್ಳಕೆರೆ ಶ್ರೀ ಬಸವ ಕಿರಣ ಸ್ವಾಮೀಜಿ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯ ದರ್ಶಿ ಎ. ಜೆ. ಪರಮಶಿವಯ್ಯ ಮೊದಲಾದವರಿದ್ದರು.

## ಜಾತಿ ಗಣತಿ ಇಲ್ಲ : ಕೇಂದ್ರ

(1ನೇ ಪುಟದಿಂದ) ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕಿದೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ ಹಾಗೂ ಒಡಿಶಾಗಳು ಮುಂಬರುವ ಜನಗಣತಿಯಲ್ಲಿ ಜಾತಿ ಗಣತಿ ನಡೆಸಬೇಕೆಂದು ಕೇಳಿವೆ. ಆದರೆ, ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಹೊರತು ಪಡಿಸಿ ಉಳಿದವರ ಗಣತಿ ನಡೆಸದಿರುವುದು ಸರ್ಕಾರದ ನೀತಿಯಾಗಿದೆ ಎಂದಿದ್ದಾರೆ.

## ನಾಮಿನಿ ಮಾಡಿಸಿ

(1ನೇ ಪುಟದಿಂದ) ಕೃಷಿ ಇಲಾಖೆಯಲ್ಲಿ ಕಚೇರಿ ಮಾಡಿಕೊಳ್ಳದೇ, ಪ್ರತಿ ತಾಲೂಕಿನಲ್ಲಿ ಪ್ರತ್ಯೇಕ ಕಚೇರಿ ತೆರೆಯಬೇಕು, ಕಚೇರಿ ತೆರೆದ ಸ್ಥಳದ (ಲೊಕೇಷನ್) ಜಿಪಿಎಸ್ ಲಿಂಕ್ ಅನ್ನು ಕೃಷಿ ಇಲಾಖೆಗೆ ನೀಡಬೇಕು ಎಂದರು. ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ರೈತರು ಆಧಾರ್ ಕಾರ್ಡ್ ಸಂಖ್ಯೆ ಜೋಡಿಸಿ ಈ ಬ್ಯಾಂಕ್ ಅಕೌಂಟ್ ಅನ್ನೇ ಬೆಳೆ ವಿಮೆಗೆ ದಾಖಲಿಸಬೇಕು.


ಕೆಲವೆಡೆ ರೈತರ ಆಧಾರ್ ಕಾರ್ಡ್ ಬೆಳೆ ವಿಮೆಗೆ ಜೋಡಣೆ ಯಾದರೂ ಬ್ಯಾಂಕ್ ಖಾತೆಗಳು ಚಾಲ್ತಿಯಲ್ಲಿರದ ಪ್ರಸಂಗಗಳು ಎದುರಾಗಿವೆ. ಇದರಿಂದ ಬೆಳೆ ವಿಮೆ ಪಡೆಯಲು ರೈತರಿಗೆ ತೊಂದರೆ ಉಂಟಾಗಿದೆ, ಆದ್ದರಿಂದ ಬ್ಯಾಂಕ್ ಖಾತೆ ಚಾಲ್ತಿಯಲ್ಲಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ತಿಳಿಸಿದರು.

ಜನ್ಮದಿನದ ಶುಭಾಶಯಗಳು

ಮಹಾನಗರ ಪಾಲಿಕೆ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಲ್.ಡಿ. ಗೋಣೆಪ್ಪ ಅವರ ಪುತ್ರ
ಶ್ರೀ ಎಲ್.ಜಿ. ಬಸವರಾಜ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
✦ ಶಾಮನೂರು ನಾಗರಾಜ್
✦ ಎಲ್.ಜಿ. ಪ್ರಸನ್ನ
✦ ಹೆಚ್. ಹುಲಿಗೇಶ್
✦ ಮ್ಯಾನೇಜರ್ ರಮೇಶ್
✦ ಸಂದೀಪ್ ✦ ಡಿ. ಹನುಮಂತ
✦ ಬಸವರಾಜ್ ✦ ಲವಿತ್ ಪೊಲೀಸ್
✦ ಲೋಕೇಶ್ ✦ ಡೆಂಟಲ್ ರಾಮ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ
ಸಂ: ಕರಾಸಾ/ದಾವಿ/ವಿತದ/398/21–22 ದಿನಾಂಕ: 19.07.2021
ಇ–ಟೆಂಡರ್ ಪ್ರಕಟಣೆ ಸಂಖ್ಯೆ: 01/2021–22
(ತನಿಖಾ ಕಾರ್ಯಕ್ಕೆ ಲಘು ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು)
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ತನಿಖಾ ಕಾರ್ಯಕ್ಕಾಗಿ ಖಾಸಗಿ ವಾಹನ (ಕಾರು)ಗಳನ್ನು ತೆಗೆದುಕೊಳ್ಳುವ ಕುರಿತು ದಿನಾಂಕ: 19.07.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರ್‌ಗೆ ಭಾಗವಹಿಸುವವರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದ ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ: 07.08.2021ರಂದು ಸಮಯ 17:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿರುತ್ತದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಿದ ಇ.ಎಂ.ಡಿ. ಡಿ.ಡಿ. ಅರ್ಜಿ ಶುಲ್ಕ ಮತ್ತು ದಾಖಲಾತಿಗಳನ್ನು ವಿಭಾಗೀಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ದಿನಾಂಕ 09.08.2021ರ ಸಂಜೆ 17:00ರ ಒಳಗಾಗಿ ಹಾಕುವುದು. ಇ–ಟೆಂಡರ್ ತೆರೆಯುವ ದಿ: 10.08.2021 ರಂದು ಸಮಯ ಬೆಳಿಗ್ಗೆ 11:00 ಗಂಟೆಗೆ (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760990452, 7760990461.
ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ
ವಾಸಾಸಂಇ/ಉನಿನ/ಎಲ್‌ಸಿ/895/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಾಡಿಗೆಗೆ / ಲೀಸ್‌ಗೆ
ಪಿ.ಜೆ. ಬಡಾವಣೆಯ ಅಕ್ಕಮಹಾದೇವಿ ರಸ್ತೆಯಲ್ಲಿ ಸುಮಾರು 5000 ದಿಂದ 10000 ಅಡಿಗಳ ವಿಸ್ತೀರ್ಣವುಳ್ಳ ಕಟ್ಟಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹೋಟೆಲ್ ಮತ್ತು ಲಾಡ್ಜಿಂಗ್, ಕಾಲೇಜ್, ಬ್ಯಾಂಕ್, ಆಫೀಸ್‌ಗಳನ್ನು ಮಾಡಿಕೊಳ್ಳಲು ಅನುಕೂಲವುಳ್ಳ ಕಟ್ಟಡ ವಿರುತ್ತದೆ.
ಕಟ್ಟಡದಲ್ಲಿ 15 ರಿಂದ 20 ರೂಂಗಳು 4 ರಿಂದ 5 ದೊಡ್ಡ ಹಾಲ್‌ಗಳನ್ನು ಒಳಗೊಂಡಿರುತ್ತದೆ. ತಮ್ಮ ಅನುಕೂಲಗಳಿಗೆ ತಕ್ಕಂತೆ ಆಲ್ಟ್ರೇಷನ್ ಸಹ ಮಾಡಿಕೊಡುತ್ತೇವೆ. ಸಂಪರ್ಕಿಸಿ
98441 37228, 78920 49838

ಬಕ್ರೀದ್ ಹಬ್ಬದ ಶುಭಾಶಯಗಳು
ಸಮಸ್ತ ಮುಸ್ಲಿಂ ಬಾಂಧವರಿಗೆ
ತ್ಯಾಗ ಬಲಿದಾನದ ಸಂಕೇತವಾದ ಪವಿತ್ರ
ಬಕ್ರೀದ್ ಹಬ್ಬದ ಹಾರ್ದಿಕ ಶುಭಾಶಯಗಳು.
ಬಕ್ರೀದ್ ಹಬ್ಬವು ಸರ್ವರಿಗೂ
ಸುಖ, ಶಾಂತಿ, ನೆಮ್ಮದಿ
ನೀಡಲೆಂದು ಹಾರೈಸುವ

ಎಂ. ಆರ್. ಸಾದಿಕ್
ಮಾಜಿ ಅಧ್ಯಕ್ಷರು,
ದಾವಣಗೆರೆ ಮಂಡಕ್ಕಿ
ಉತ್ಪಾದಕರ ಕ್ಷೇಮಾಭಿವೃದಿ
ಸಂಘ, ದಾವಣಗೆರೆ.



## ರೈತರು ಖುಷಿಯಿಂದ ಎಡೆಕುಂಟೆ ಹೊಡೆಯುತ್ತಿರುವ ದೃಶ್ಯ

ಕಳೆದ ಒಂದು ವಾರದಿಂದ ಜಿಟಿ ಜಿಟಿ ಹಾಗೂ ಜೋರಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮಲೇಬೆನ್ನೂರು ಪಟ್ಟಣದ ಆಶ್ರಯ ಕಾಲೋನಿ ಸಮೀಪ ಮಳೆ ಆಶ್ರಿತ ಗುಡ್ಡದ ನೂರಾರು ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದ ಮೆಕ್ಕೇಜೋಳ ಹುಲುಸಾಗಿ ಬೆಳೆಯುತ್ತಿದ್ದು, ಮಂಗಳವಾರ ಮೋಡ ಮುಚ್ಚಿದ ಹಾಗೂ ಆಗಾಗ್ಗೆ ಬರುತ್ತಿದ್ದ ಮಳೆಯ ನಡುವೆಯೂ ರೈತರು ಖುಷಿಯಿಂದ ಎಡೆಕುಂಟೆ ಹೊಡೆಯುತ್ತಿರುವ ಸುಂದರ ದೃಶ್ಯ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿತು.

# ಅವಕಾಶ ಕಳೆದುಕೊಂಡು ಪಶ್ಚಾತ್ತಾಪ ಪಡಬೇಡಿ


ದಾವಣಗೆರೆ,ಜು.20- 'ಸಿಕ್ಕಿರುವ ಅವಕಾಶವನ್ನು ಕಳೆದುಕೊಳ್ಳಬೇಡಿ, ನಂತರ ಅದನ್ನು ಮತ್ತೆ ಹುಡುಕುತ್ತಾ ಪಶ್ಚಾತ್ತಾಪ ಪಡುವಂತಾಗಬಾರದು' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ನಗರ ಘಟಕದ ಅಧ್ಯಕ್ಷ ಜಿ.ಶಿವಯೋಗಪ್ಪ ಬಿಜೆಪಿ ವರಿಷ್ಠರಿಗೆ ಎಚ್ಚರಿಕೆ ನೀಡಿದ್ದಾರೆ.

ವೀರಶೈವ ಸಮಾಜದ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಲಾಗುತ್ತಿದೆ ಎಂದು ಕೇಳಿಬರುತ್ತಿರುವ ವಿಷಯದ ಹಿನ್ನೆಲೆಯಲ್ಲಿ ಶಿವಯೋಗಪ್ಪ ಅವರು ಬಿಜೆಪಿ ವರಿಷ್ಠರಿಗೆ ಮೇಲಿನಂತೆ ಸೂಕ್ಷ್ಮವಾಗಿ ಎಚ್ಚರಿಕೆ ಕೊಟ್ಟಿದ್ದಾರೆ.

ರಾಜ್ಯ ಸರ್ಕಾರದ ನಾಯಕತ್ವ ವಹಿಸಿಕೊಂಡಿರುವ ಯಡಿಯೂರಪ್ಪ ಅವರು ನಾಡಿನ ಎಲ್ಲಾ ವರ್ಗಗಳ ಏಳಿಗೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ವಿಶ್ವವನ್ನೇ ತಲ್ಲಣಗೊಳಿಸಿರುವ ಕೊರೊನಾ ಸೇರಿದಂತೆ ಹಲವಾರು ಸಂದಿಗ್ಧ ಪರಿಸ್ಥಿತಿಗಳಲ್ಲೂ ದಿಟ್ಟತನದಿಂದ ತಮ್ಮ ವಯಸ್ಸನ್ನೂ ಲೆಕ್ಕಿಸದೇ ಸ್ವತಃ ರಾಜ್ಯಾದ್ಯಂತ ಪ್ರವಾಸ ಮಾಡಿ ನಾಡು - ನುಡಿಯ ಸೇವೆ ಸಲ್ಲಿಸುತ್ತಿದ್ದಾರೆ. ಈ ಬಗ್ಗೆ ಪಕ್ಷಾತೀತವಾಗಿ ಎಲ್ಲರೂ ಶ್ಲಾಘಿಸುತ್ತಿದ್ದಾರೆ ಎಂದು ಉದಾಹರಣೆಯೊಂದಿಗೆ ಬಿಜೆಪಿ ವರಿಷ್ಠರಿಗೆ ಶಿವಯೋಗಪ್ಪ ಮನವರಿಕೆ ಮಾಡಿಕೊಟ್ಟಿದ್ದಾರೆ.

ಯಶಸ್ವಿ ಮತ್ತು ಶಾಂತಿಯುತವಾಗಿ ಆಡಳಿತವನ್ನು ಮುನ್ನಡೆಸುತ್ತಿದ್ದರೂ ಅವಧಿಗೂ ಮುನ್ನ ಯಡಿಯೂರಪ್ಪ ಅವರನ್ನು ನೆಪದ ಕಾರಣಗಳನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಲಾಗುತ್ತಿದೆ ಎಂದು ದೆಹಲಿಯಿಂದ ಕೇಳಿಬರುತ್ತಿರುವ ಊಹಾಪೋಹಗಳ ಬಗ್ಗೆ ಕಿಡಿ ಕಾರಿರುವ ಶಿವಯೋಗಪ್ಪ, ಒಂದು ವೇಳೆ ಆ ಸ್ಥಾನದಿಂದ ಕೆಳಗಿಳಿಸಿದ್ದೇ ಆದಲ್ಲಿ ಎರಡು ಕೋಟಿ ಜನಸಂಖ್ಯೆ ಹೊಂದಿರುವ ಲಿಂಗಾಯತ ಸಮುದಾಯವನ್ನು ಕಳೆದುಕೊಳ್ಳ ಬೇಕಾದೀತು ಎಂದು ಎಚ್ಚರಿಕೆಯ ಗಂಟೆ ಭಾರಿಸಿದ್ದಾರೆ.

**ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಲಾಗುತ್ತಿದೆ ಎಂದು ಕೇಳಿಬರುತ್ತಿರುವ ವಿಷಯದ ಹಿನ್ನೆಲೆಯಲ್ಲಿ ವೀರಶೈವ ಮಹಾಸಭಾದ ಅಧ್ಯಕ್ಷ ಜಿ. ಶಿವಯೋಗಪ್ಪ ಅವರು ಬಿಜೆಪಿ ವರಿಷ್ಠರಿಗೆ ನೀಡಿರುವ ಎಚ್ಚರಿಕೆ.**



ಈ ಹಿನ್ನೆಲೆಯಲ್ಲಿ ರಂಭಾಪುರಿ ಪೀಠದ ಜಗದ್ಗುರುಗಳು, ಶ್ರೀಶೈಲ ಪೀಠದ ಜಗದ್ಗುರುಗಳು ಸೇರಿದಂತೆ ನಾಡಿನ ಹಲವಾರು ಮಠಾಧೀಶರುಗಳು, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಡಾ. ಶಾಮನೂರು ಶಿವಶಂಕರಪ್ಪ, ಕಾಂಗ್ರೆಸ್ ಪಕ್ಷದ ಮತ್ತೋರ್ವ ಹಿರಿಯ ಮುಖಂಡ ಎಂ.ಬಿ. ಪಾಟೀಲ್ ಅವರುಗಳೂ ಸೇರಿದಂತೆ, ಪಕ್ಷಾತೀತವಾಗಿ ವಿವಿಧ ಪಕ್ಷಗಳ ನಾಯಕರು ಯಡಿಯೂರಪ್ಪ ಅವರನ್ನು ಬೆಂಬಲಿಸಿ ನೀಡಿರುವ ಹೇಳಿಕೆಗಳನ್ನು ಶಿವಯೋಗಪ್ಪ ಸ್ವಾಗತಿಸಿ, ಕೃತಜ್ಞತೆ ಸಲ್ಲಿಸಿದ್ದಾರೆ.

ನಾಡಿನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿ, 'ವೀರಶೈವ ಮಹಾಸಭಾ ನಿಮ್ಮ ಬೆನ್ನಿಂದಿದೆ' ಎಂದು ಹೇಳುವುದರ ಮೂಲಕ ಸಿ.ಎಂ. ಬೆಂಬಲಕ್ಕೆ ನಿಂತಿರುವುದು ಸ್ವಾಗತಾರ್ಹ.

ವೀರಶೈವ ಸಮಾಜದ ಮುಖಂಡರಿಗೆ ಅಗೌರವ ತೋರಿದಾಗಲೆಲ್ಲಾ ಅವರ ಬೆಂಬಲಕ್ಕೆ ನಿಲ್ಲುತ್ತಿರುವ ಎಸ್ಸೆಸ್ ಅವರಿಗೆ ಕೃತಜ್ಞತೆಗಳು ಎಂದು ಶಿವಯೋಗಪ್ಪ ತಿಳಿಸಿದ್ದಾರೆ.

**ಹೋರಾಟಕ್ಕೆ ಕರೆ :** ಸಮಾಜದ ಮುಖಂಡರನ್ನು ಎಲ್ಲಾ ಪಕ್ಷಗಳು ಉಪಯೋಗಿಸಿಕೊಂಡು ನಂತರ ಅಲಕ್ಷ್ಯ ಮಾಡುತ್ತಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ಶಿವಯೋಗಪ್ಪ, ಇಂತಹ ಸಂದರ್ಭದಲ್ಲಿ ಬೀದಿಗಿಳಿದು ಹೋರಾಟ ಮಾಡುವಂತಹ ಪರಿಸ್ಥಿತಿ ಬಂದೊದಗಿದೆ ಎಂದು ಹೇಳಿದ್ದಾರೆ.

ವೀರೇಂದ್ರ ಪಾಟೀಲ್, ಎಸ್.ಆರ್. ಬೊಮ್ಮಾಯಿ, ಜೆ. ಹೆಚ್. ಪಟೇಲ್ ಅವರಿದ್ದ ಆಯಾ ಪಕ್ಷಗಳು ಅನ್ಯಾಯ ಮಾಡಿವೆ ಎಂದು ಉದಾಹರಣೆ ಮೂಲಕ ತಿಳಿಸಿರುವ ಶಿವಯೋಗಪ್ಪ, ಅಂತಹ ಸ್ಥಿತಿಗೆ ಈಗ ಯಡಿಯೂರಪ್ಪ ಅವ ರನ್ನೂ ತರಲಾಗುತ್ತಿದೆ. ಸಮಾಜದವರು ಹೋರಾಟಕ್ಕಿಳಿಯಬೇಕು ಎಂದಿದ್ದಾರೆ.

## ಕೇರಳ : ಬಕ್ರೀದ್ ವಿನಾಯಿತಿಗೆ ಸುಪ್ರೀಂ ಕೋರ್ಟ್ ತರಾಟೆ

ನವದೆಹಲಿ, ಜು. 20 - ಕೊರೊನಾ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕೇರಳ ಸರ್ಕಾರ ಬಕ್ರೀದ್ ಸಂದರ್ಭದ ವಿನಾಯಿತಿ ನೀಡಿರುವುದು ಸೂಕ್ತವಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಜೀವನದ ಹಕ್ಕು ಎಲ್ಲಕ್ಕಿಂತ ಮುಖ್ಯ ಎಂದು ಹೇಳಿದೆ.

**ವರ್ತಕರ ಒತ್ತಡಕ್ಕೆ ಮಣಿದು ವಿನಾಯಿತಿ ಎಂದಿರುವುದು ಆಡಳಿತದ ಶೋಚನೀಯ ಸ್ಥಿತಿ**

ಕೇರಳ ಸರ್ಕಾರ ವಿನಾಯಿತಿ ನೀಡಿರುವುದು ವೈರಸ್ ಹರಡಲು ಕಾರಣವಾಗ ಬಹುದು. ವರ್ತಕರ ಒತ್ತಡಕ್ಕೆ ಮಣಿದು ವಿನಾಯಿತಿ ನೀಡಿರುವುದಾಗಿ ಕೇರಳ ಸರ್ಕಾರ ಹೇಳುತ್ತಿರುವುದು ಆಡಳಿತದ ಶೋಚನೀಯ ಸ್ಥಿತಿ ತೋರಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಆರ್.ಎಫ್. ನಾರಿಮನ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ವಿಚಾರಣೆ ನಡೆಸಿದ್ದು, ಕೇರಳ ಸರ್ಕಾರ ಸಂವಿಧಾನದ 21ನೇ ವಿಧಿಯಲ್ಲಿ ನೀಡಲಾಗಿರುವ ಜೀವದ ಹಕ್ಕಿದೆ ಮಣಿಯಬೇಕು ಎಂದು ನಿರ್ದೇಶನ ನೀಡುವುದಾಗಿ ತಿಳಿಸಿದೆ.

ಬಕ್ರೀದ್ ವಿನಾಯಿತಿ ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಸೋಂಕು ಅತಿ ಹೆಚ್ಚಾಗಿರುವ ಡಿ ಗುಂಪಿನ ಪ್ರದೇಶಗಳಲ್ಲಿ ದಿನವಿಡೀ ವಿನಾಯಿತಿ ನೀಡಿರುವುದು ಎಚ್ಚರಿಕೆ ಗಂಟೆ ಬಾರಿಸುವಂಥದ್ದು ಎಂದು ಹೇಳಿದೆ.

ರಾಜ್ಯ ಸರ್ಕಾರ ಕೊರೊನಾ ಸಂದರ್ಭದಲ್ಲಿ ವಿನಾಯಿತಿ ನೀಡಿರುವುದರಿಂದ ಯಾರಿಗಾದರೂ ತೊಂದರೆಯಾದರೆ ಅವರು ನ್ಯಾಯಾಲಯಕ್ಕೆ ಬರಬಹುದು. ನ್ಯಾಯಾಲಯ ಅದಕ್ಕೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅರ್ಜಿಯನ್ನು ವಿಲೇವಾರಿ ಮಾಡಿದೆ.

## ದರೋಡೆ : ಮೂವರ ಬಂಧನ

ದಾವಣಗೆರೆ, ಜು.20- ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿರುವ ಸ್ಥಳೀಯ ಗ್ರಾಮಾಂತರ ಪೊಲೀಸರು, ಮೊಬೈಲ್ ಫೋನ್, 3,550 ರೂ. ನಗದು, ಒಂದು ಬೈಕ್ ವಶಪಡಿಸಿಕೊಂಡಿದ್ದಾರೆ.

ನಗರದ ಎಸ್.ಎಸ್.ಎಂ ನಗರ 'ಬಿ' ಬ್ಲಾಕ್ ವಾಸಿಗಳಾದ ಜಿಶಾನ್ (20), ಅಬ್ದುಲ್ ಅಫ್ತಾಬ್ (20), ಜಬಿವುಲ್ಲಾ (19) ಬಂಧಿತರು.

ಚಿಕ್ಕಬೂದಿಹಾಳ್ ಗ್ರಾಮದ ಬೂಸವ್ವನಹಟ್ಟಿ ರಸ್ತೆಯಲ್ಲಿ ಬೂಸವ್ವನ ಹಟ್ಟಿಯ ರೇವಣ್ಣಸಿದ್ದಪ್ಪ ಇದೇ ದಿನಾಂಕ 10ರಂದು ರಾತ್ರಿ 8 ಗಂಟೆ ಸಮಯದಲ್ಲಿ ಬೈಕ್ ನಲ್ಲಿ ಹೋಗುತ್ತಿದ್ದಾಗ, ಆರೋಪಿತರು ಬೈಕ್ ಹಿಂಬಾಲಿಸಿಕೊಂಡು ಬಂದು ವಿನಾಕಾರಣ ಜಗಳ ತೆಗೆದು ಬೈಕ್ ಅಡ್ಡಗಟ್ಟಿ ನಿಲ್ಲಿಸಿ ತಲೆಗೆ ಕಲ್ಲಿನಿಂದ ಹೊಡೆದು 15 ಸಾವಿರ ನಗದು ಹಾಗೂ ಒಂದು ಮೊಬೈಲ್, ಬೈಕಿನ ಕೀ ಕಸಿದುಕೊಂಡು ಹೋಗಿದ್ದರು ಎಂದು ದಿನಾಂಕ 11ರಂದು ರೇವಣಸಿದ್ದಪ್ಪ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಮಾರ್ಗದರ್ಶನದಲ್ಲಿ ತನಿಖಾಧಿಕಾರಿ ಗ್ರಾಮಾಂತರ ಪಿಐ ಲಿಂಗನಗೌಡ ನೆಗಳೂರು ನೇತೃತ್ವದಲ್ಲಿ ಸಿಬ್ಬಂದಿಗಳಾದ ಎಎಸ್ಐ ಜೋವಿತ್ ರಾಜ್, ದೇವೇಂದ್ರಪ್ಪ, ನಾಗರಾಜಯ್ಯ, ಮಹೇಶ ಒಳಗೊಂಡ ತಂಡವು ನಿನ್ನೆ ಆರೋಪಿಗಳನ್ನು ಬಂಧಿಸಿದೆ.

## ಸಹಕಾರ : ಸಂವಿಧಾನದ ತಿದ್ದುಪಡಿಯ ಕೆಲ ಅಂಶಗಳು ರದ್ದು

ನವದೆಹಲಿ, ಜು. 20 – ಯುಪಿಎ ಕಾಲದಲ್ಲಿ ಸಂವಿಧಾನಕ್ಕೆ 97ನೇ ತಿದ್ದುಪಡಿ ತರುವ ಮೂಲಕ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದಂತೆ ಜಾರಿಗೆ ತರಲಾಗಿದ್ದ ಕೆಲ ಅಂಶಗಳನ್ನು ಸುಪ್ರೀಂ ಕೋರ್ಟ್ 2-1ರ ಬಹುಮತದ ತೀರ್ಪಿನಿಂದ ರದ್ದುಗೊಳಿಸಿದೆ. ಅರ್ಧದಷ್ಟು ರಾಜ್ಯಗಳಿಂದ ಒಪ್ಪಿಗೆ ಪಡೆದ ನಂತರವೇ ಈ ಅಂಶಗಳು ಜಾರಿಯಾಗಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈ ತಿದ್ದುಪಡಿಯಲ್ಲಿ ಬಹು ರಾಜ್ಯಗಳ ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಅಂಶಗಳು ಸಿಂಧುವಾಗಿವೆ ಎಂದು ನ್ಯಾಯಾಲಯ ತಿಳಿಸಿದೆ. ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದಂತೆ ಸಂವಿಧಾನಕ್ಕೆ 97ನೇ ತಿದ್ದುಪಡಿ ತರಲು ಸಂಸತ್ತು ಡಿಸೆಂಬರ್ 2011ರಲ್ಲಿ ಒಪ್ಪಿಗೆ ನೀಡಿತ್ತು. ತಿದ್ದುಪಡಿ ಫೆಬ್ರವರಿ 15, 2012ರಿಂದ ಜಾರಿಗೆ ಬಂದಿತ್ತು.

## ಕೊಲೆಗಾರನ ಪತ್ತೆ ಹಚ್ಚಿದ ಪೊಲೀಸ್ ಶ್ವಾನ ತುಂಗಾ

ದಾವಣಗೆರೆ, ಜು.20- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದಲ್ಲಿ ಒಂಟಿ ಮಹಿಳೆ ಕೊಲೆ ಪ್ರಕರಣವನ್ನು ಪತ್ತೆ ಮಾಡುವಲ್ಲಿ ಪೊಲೀಸ್ ಶ್ವಾನ ತುಂಗಾ ಯಶಸ್ವಿಯಾಗಿದ್ದು, ಆರೋಪಿಯನ್ನು ಬಂಧಿಸಿರುವ ಪೊಲೀಸರು 4.10 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಕಕ್ಕರಗೊಳ್ಳದ ಬಿ.ಜಿ. ರೇವಣಸಿದ್ದಪ್ಪ (48) ಬಂಧಿತ ಆರೋಪಿ. ಅದೇ ಗ್ರಾಮದ 75 ವರ್ಷದ ಗೌರಮ್ಮ ತಮ್ಮ ಮನೆಯಲ್ಲಿ ಭಾನುವಾರ ರಾತ್ರಿ ಒಂಟಿಯಾಗಿದ್ದ ವೇಳೆ ಆರೋಪಿತನು ಕುತ್ತಿಗೆಗೆ ಟವಲು ಬಿಗಿದು ಕೊಲೆ ಮಾಡಿದ್ದ.

ಗೌರಮ್ಮನ ಎರಡೂ ಕಾಲುಗಳನ್ನು ಮಡಚಿ, ಶಾಲಿನಲ್ಲಿ ಕಟ್ಟಿ ಹಾಕಲಾಗಿತ್ತು. ಈ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೃತಳ ಮಗ ಕರಿಬಸಪ್ಪ ಸೋಮವಾರ ದೂರು ನೀಡಿದ್ದರು.

ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಮಾರ್ಗದರ್ಶನದಲ್ಲಿ ಸಿಪಿಐ ಲಿಂಗನಗೌಡ ನೆಗಳೂರು ನೇತೃತ್ವದ ತಂಡವು ಪೊಲೀಸ್ ಶ್ವಾನ ದಳದ ತುಂಗಾ ಶ್ವಾನ ಸಮೇತ ಘಟನಾ ಸ್ಥಳಕ್ಕೆ ತೆರಳಿ ತನಿಖೆ ಕೈಗೊಂಡಿದ್ದರು.

ತುಂಗಾ ಶ್ವಾನವು ಅನುಮಾನಾಸ್ಪದ ಆರೋಪಿತನ ಮನೆಯ ಸುಳಿವು ನೀಡಿತ್ತು. ರೇವಣಸಿದ್ದಪ್ಪನನ್ನು ಇಂದು ಬೆಳಿಗ್ಗೆ ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಮೃತ ಗೌರಮ್ಮನಿಂದ ಪಡೆದಿದ್ದ ಸಾಲ ಮರಳಿ ಕೊಡಬೇಕಾಗುತ್ತದೆಂಬ ದುರುದ್ದೇಶದಿಂದ ಕೊಲೆ ಮಾಡಿ, ಬಂಗಾರದ ಆಭರಣ ತೆಗೆದುಕೊಂಡು ಹೋಗಿದ್ದ ಬಗ್ಗೆ ಸತ್ಯ ಬಾಯಿ ಬಿಟ್ಟಿದ್ದಾನೆ.

ಗ್ರಾಮಾಂತರ ಎಸ್ಐ ಎಸ್.ಜಿ. ಅಶ್ವಿನ್ ಕುಮಾರ್, ಮಹಿಳಾ ಪಿಎಸ್ಐ ಪುಷ್ಪಲತಾ, ಪ್ರೊಬೇಷನರಿ ಎಸ್ಐ ಎಸ್.ಬಿ. ಅಜ್ಜಪ್ಪ, ಸಿಬ್ಬಂದಿಗಳಾದ ಗುರುಶಾಂತಯ್ಯ, ಸೋಮಶೇಖರ, ಮಂಜನಗೌಡ, ಪರಶುರಾಮ, ದೇವೇಂದ್ರ ನಾಯ್ಕ, ರಾಜು ಲಮಾಣಿ, ಮಂಜುನಾಥ, ಮಹೇಶ, ನಾಗರಾಜಯ್ಯ, ಎಂ.ಡಿ. ಷಫೀ, ಕೆ.ಎಸ್. ಲೋಹಿತ್, ರಾಘವೇಂದ್ರ, ಉಮೇಶ ಬಿಸ್ನಾಳ್, ಶಾಂತರಾಜ, ನೂರುಲ್ಲಾ ಷರೀಫ್ ಒಳಗೊಂಡ ತಂಡ ಕೊಲೆ ಪ್ರಕರಣವನ್ನು ಭೇದಿಸಿದೆ.

## ಸಿಎಂ ಸ್ಥಾನದಿಂದ ಯಡಿಯೂರಪ್ಪ ಕೆಳಗಿಳಿಸಿದರೆ ಬಿಜೆಪಿಗೆ ಉಳಿಗಾಲವಿಲ್ಲ

ಚನ್ನಗಿರಿ, ಜು.20- ಯಡಿಯೂರಪ್ಪ ಅವರನ್ನೇ ಮುಂದಿನ 2 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು. ಇಲ್ಲದಿದ್ದರೆ ಬಿಜೆಪಿಗೆ ಉಳಿಗಾಲ ಇಲ್ಲ. ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ವೀರಶೈವ ಸಮುದಾಯವೂ ಅವಕಾಶ ನೀಡುವುದಿಲ್ಲ ಎಂದು ಚನ್ನಗಿರಿಯ ಹಿರೇಮಠದ ಶ್ರೀ ಕೇದಾರಲಿಂಗ ಶಿವ ಶಾಂತವೀರ ಶಿವಾಚಾರ್ಯ ಸ್ವಾಮೀಜಿ ಸೂಚ್ಯವಾಗಿ ಎಚ್ಚರಿಸಿದ್ದಾರೆ.

**ವೀರಶೈವ ಸಮುದಾಯವೂ ಅವಕಾಶ ನೀಡಲ್ಲ: ಚನ್ನಗಿರಿ ಹಿರೇಮಠದ ಶ್ರೀಗಳ ಎಚ್ಚರಿಕೆ**



ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ 2 ವರ್ಷ ಯಡಿಯೂರಪ್ಪ ಅವರನ್ನೇ ಸಿಎಂ ಆಗಿ ಮುಂದುವರಿಸಿದರೆ ಬಿಜೆಪಿಗೆ ಅನುಕೂಲ. ಸಿಎಂ ಸ್ಥಾನದಿಂದ ಕೆಳಗಿಳಿಸಿದರೆ ಸೂಕ್ತವಲ್ಲ. ಬಿಜೆಪಿ ಪಕ್ಷದ ಸಂಘಟನೆಗೆ ಕಷ್ಟವಾಗಬಹುದು ಎಂದು ಮುನ್ನೆಚ್ಚರಿಸಿದರು.

ಯಡಿಯೂರಪ್ಪ ಕೇವಲ ವೀರಶೈವ ಲಿಂಗಾಯತ ಸಮಾಜಕ್ಕಷ್ಟೇ ನಾಯಕರಲ್ಲ. ಎಲ್ಲಾ ಜಾತಿ, ವರ್ಗಗಳ ಜನರ ಮನ ಗೆದ್ದ ನಾಯಕ. ಮಠ, ಮಂದಿರ, ಚರ್ಚ್, ಮಸೀದಿಗಳು, ಹಿಂದೂ, ಮುಸ್ಲಿಂ, ಕ್ರೈಸ್ತ ಹೀಗೆ ಸರ್ವ ಧರ್ಮ, ಸರ್ವ ಧರ್ಮೀಯರಿಗೂ ಅನುಕೂಲ ಮಾಡಿದ್ದಾರೆ. ಎಲ್ಲಾ ಜಾತಿ, ಧರ್ಮೀಯರ ಹಿತ ಕಾಯುವ ಯಡಿಯೂರಪ್ಪ ಅವರಿಗೆ ಸಿಎಂ ಸ್ಥಾನದಿಂದ ಕೆಳಗಿಳಿಸಲು ವೀರಶೈವ ಸಮುದಾಯ ಅವಕಾಶ ನೀಡುವುದಿಲ್ಲ ಎಂದ ಅವರು, ತಮ್ಮ ಎಲ್ಲಾ ಮಠ ಮಾನ್ಯಗಳೂ ಯಡಿಯೂರಪ್ಪ ಪರ ಇರುವುದಾಗಿ ಬೆಂಬಲ ಸೂಚಿಸಿದರು.

ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಹಿರಿಯ ನಾಯಕನಿಗೆ ಪಕ್ಷದ ರಾಷ್ಟ್ರೀಯ ನಾಯಕರು ಗೌರವ ದಿಂದ ನಡೆಸಿಕೊಳ್ಳಬೇಕು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಗಮನ ಹರಿಸಬೇಕು ಎಂದಿದ್ದಾರೆ.

## 13 ಪಾಸಿಟಿವ್, 23 ಗುಣಮುಖ

ದಾವಣಗೆರೆ, ಜು.18- ಜಿಲ್ಲೆಯಲ್ಲಿ ಮಂಗಳವಾರ 13 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 23 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 7, ಹರಿಹರ 1, ಚನ್ನಗಿರಿ 1, ಹೊನ್ನಾಳಿ 2 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 345 ಸಕ್ರಿಯ ಪ್ರಕರಣಗಳಿವೆ.

## ನಗರದಲ್ಲಿ ನಾಳೆ ಉತ್ಸವಾಂಬ ದೇವಿಗೆ ಮಹಾಮಂಡಲಾಭಿಷೇಕ



ದಾವಣಗೆರೆ, ಜು. 20 - ಪಿ. ಹಾಲೇಶಪ್ಪ (ವಸಂತ ರಸ್ತೆ) ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿ ದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 9ನೇ ವರ್ಷದ ಮಹಾಮಂಡಲಾಭಿಷೇಕವು ನಾಡಿದ್ದು ದಿನಾಂಕ 22 ರಿಂದ ಬರುವ ಸೆಪ್ಟಂಬರ್ 07 ರವರೆಗೆ 48 ದಿನಗಳ ಕಾಲ ದೇವರಿಗೆ ಸರ್ವ ಭಕ್ತಾದಿಗಳಿಂದ ಮಹಾಭಿಷೇಕವಿರುತ್ತದೆ.

ಕೊನೆಯ ದಿನ ತಾಯಿಯವರಿಗೆ ಮಹಾಪೂಜೆ ಹಾಗೂ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಉತ್ಸವಾಂಬ ದೇವಿ ಭಕ್ತ ಮಂಡಳಿಯವರು ತಿಳಿಸಿದ್ದಾರೆ.

## ನಗರಕ್ಕೆ ನಾಡಿದ್ದು ಹೆಚ್.ಕೆ. ಪಾಟೀಲ್



ದಾವಣಗೆರೆ,ಜು.20- ನಗರದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಚೌಕಿಪೇಟೆ ಶಾಖೆಯಲ್ಲಿ ನೂತನವಾಗಿ ಎಟಿಎಂ ಸ್ಥಾಪಿಸಲಾಗಿದ್ದು, ಕರ್ನಾಟಕ ರಾಜ್ಯ ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಮಾಜಿ ಸಚಿವ - ಶಾಸಕ ಹೆಚ್.ಕೆ. ಪಾಟೀಲ್ ಉದ್ಘಾಟಿಸಲಿದ್ದಾರೆ.

ದಿನಾಂಕ 23ರ ಶುಕ್ರವಾರ ಬ್ಯಾಂಕಿನ ಚೌಕಿಪೇಟೆ ಶಾಖೆ ಆವರಣದಲ್ಲಿ ಏರ್ಪಾಡಾಗಿರುವ ಸರಳ ಸಮಾರಂಭದಲ್ಲಿ ಹೆಚ್.ಕೆ. ಪಾಟೀಲ್ ಅವರು ಎಟಿಎಂ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಜಿಲ್ಲಾ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವಾಧ್ಯಕ್ಷರೂ ಆದ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ತಿಳಿಸಿದ್ದಾರೆ.

## 23ರಂದು ನಗರಕ್ಕೆ ಸಚಿವ ಈಶ್ವರಪ್ಪ

ದಾವಣಗೆರೆ, ಜು.20- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ಇದೇ ದಿನಾಂಕ 23 ರಂದು ಮಧ್ಯಾಹ್ನ 2 ಕ್ಕೆ ಜಿ.ಪಂ.ನಲ್ಲಿ ಗ್ರಾ.ಪಂ. ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

**ದಿ ದಾವಣಗೆರೆ–ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,**
ಆಡಳಿತ ಕಚೇರಿ : 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2. ಫೋ. : 272570

**ಬ್ಯಾಂಕಿನ ಗ್ರಾಹಕರು ಮತ್ತು ಸದಸ್ಯರುಗಳ ಗಮನಕ್ಕೆ**

ಬ್ಯಾಂಕಿನ ಗ್ರಾಹಕರು ಮತ್ತು ಸದಸ್ಯರು ಮತ್ತು ದೂರವಾಣಿ / ವಿದ್ಯುಚ್ಛಕ್ತಿ / ಮೊಬೈಲ್ / ಡಿ.ಟಿ.ಹೆಚ್. / ಗ್ಯಾಸ್ / ವಾಟರ್ ಹಾಗೂ ಇತರೆ ಬಿಲ್ಲುಗಳನ್ನು
**Bharat Bill Payments System (BBPS)**
ಮುಖಾಂತರ ನಮ್ಮ ಬ್ಯಾಂಕಿನ ಯಾವುದೇ ಶಾಖೆಯಿಂದ ಪಾವತಿಸಬಹುದಾಗಿದೆ. ಗ್ರಾಹಕರು / ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಕೋರಿದೆ.

ಶಿವಲಿಂಗಸ್ವಾಮಿ ಎಂ.
ಪ್ರಧಾನ ವ್ಯವಸ್ಥಾಪಕರು

ಎನ್.ಎ. ಮುರುಗೇಶ್
ಅಧ್ಯಕ್ಷರು

## ಪ್ರೇಮಲೀಲಾ ನಿಧನ

ದಾವಣಗೆರೆ ವಿದ್ಯಾನಗರ 1ನೇ ಬಸ್ ಸ್ಟಾಪ್ ಬಳಿ ವಾಸಿ ಜಿ.ಹೆಚ್. ಶಂಕರಪ್ಪ ಅವರ ಧರ್ಮಪತ್ನಿ **ಶ್ರೀಮತಿ ಪ್ರೇಮಲೀಲಾ** ಅವರು ದಿನಾಂಕ 20.07.2021ರ ಮಂಗಳವಾರ ರಾತ್ರಿ 9.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.07.2021ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಹೊಳಲ್ಕೆರೆ ತಾಲ್ಲೂಕಿನ ಗುಂಜಿಗನೂರು ಗ್ರಾಮದಲ್ಲಿ ನೆರವೇರಿಸಲಾಗುವುದು. ಮೃತರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ 11 ಗಂಟೆಯವರೆಗೆ ದಾವಣಗೆರೆ ವಿದ್ಯಾನಗರದ ಸ್ವಗೃಹದಲ್ಲಿ ಇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. : 94493 53939, 70222 64347, 95351 77645



ಜನನ : 10.11.1953 ನಿಧನ : 20.07.2021

## ಇಂದು ಬಕ್ರೀದ್ : ಜಾನುವಾರು ವಧೆ-ಸಾಗಾಣಿಕೆಗೆ ನಿಷೇಧ

ದಾವಣಗೆರೆ, ಜು.20- ಜಿಲ್ಲೆಯಾದ್ಯಂತ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅನಧಿಕೃತವಾಗಿ ಗೋವು/ಕರುಗಳು, ಒಂಟೆಗಳು ಮತ್ತು ಇತರೆ ಜಾನುವಾರುಗಳ ಅಕ್ರಮ ಸಾಗಾಣಿಕೆ ಹಾಗೂ ವಧೆ ಮಾಡುವುದನ್ನು ನಿಷೇಧಿಸಲಾಗಿದೆ.

ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರಗಳು ಪಶು ಸಂಗೋಪನಾ ಇಲಾಖೆಯ ಮತ್ತು ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ ಸದಸ್ಯರ ಸಹಯೋಗದೊಂದಿಗೆ ತಂಡವನ್ನು ರಚಿಸಿಕೊಂಡು ತಮ್ಮ ವ್ಯಾಪ್ತಿಯಲ್ಲಿ ಪರಿಶೀಲನೆ/ತಪಾಸಣೆಯನ್ನು ಕೈಗೊಳ್ಳುವುದು ಹಾಗೂ ಕಾನೂನು ಪ್ರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte